# www.karunaduexams.com

**ದಿನಾಂಕ 02/10/2016 ರಂದು ನಡೆದ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿ ಗ್ರೇಡ್-1 ಅಣಕು ಪರೀಕ್ಷೆಯ ಉತ್ತರ ಪತ್ರಿಕೆ**

www.karunaduexams.com

1. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಯಾವ ಪ್ರಕರಣದಡಿ ಜೀತಗಾರಿಕೆ ಸಂಬಂಧ ವರದಿ ಸಲ್ಲಿಸುವುದು ಗ್ರಾಮ ಪಂಚಾಯತಿಯ ಕರ್ತವ್ಯವಾಗಿರುತ್ತದೆ?

ಅ) ಪ್ರಕರಣ 61-ಎ

ಆ) ಪ್ರಕರಣ 58-ಎ

ಇ) ಪ್ರಕರಣ 71

ಈ) ಪ್ರಕರಣ 70

ಪ್ರಕರಣ 58-ಎ

ಪ್ರಕರಣ 58-ಎ

ಪ್ರಕರಣ 58-ಎ ಪ್ರಕಾರ ಜೀತಗಾರಿಕೆ ಸಂಬಂಧ ವರದಿ ಸಲ್ಲಿಸುವುದು ಗ್ರಾಮ ಪಂಚಾಯತಿಯ ಕರ್ತವ್ಯವಾಗಿರುತ್ತದೆ.

2. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಈ ಕೆಳಕಂಡ ಯಾರಿಗೆ ಕೆಲಸ ನೀಡಲು ಅವಕಾಶವಿದೆ?

ಅ) ಬಡವರಿಗೆ ಮಾತ್ರ

ಆ) ಗ್ರಾಮೀಣ ಭಾಗದ ಎಸ್.ಸಿ/ಎಸ್.ಟಿ/ಬಿಪಿಎಲ್ ವರ್ಗದವರಿಗೆ ಮಾತ್ರ

ಇ) ಗ್ರಾಮೀಣ ಭಾಗದಲ್ಲಿ ವಾಸವಿರುವ ಎಲ್ಲಾ ವಯಸ್ಕರಿಗೂ

ಈ) ರಾಜ್ಯದಲ್ಲಿ ವಾಸವಿರುವ ಎಲ್ಲಾ ವಯಸ್ಕರಿಗೂ

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಎಸ್ ಸಿ/ಎಸ್ ಟಿ/ಬಿಪಿಲ್ ರವರಿಗೆ ನೀಡಬೇಕೆಂಬ ನಿರ್ಬಂಧವಿಲ್ಲ. ಕೆಲಸ ಮಾಡಲು ಇಚ್ಚಿಸುವ ಗ್ರಾಮೀಣ ಭಾಗದಲ್ಲಿ ವಾಸವಿರುವ ಎಲ್ಲಾ ವಯಸ್ಕರಿಗೂ ಇದರಡಿ ಕೆಲಸ ನೀಡಬಹುದು.

3. ಅಶೋಕ್ ಮೆಹ್ತಾ ಸಮಿತಿಯ ಶಿಫಾರಸ್ಸು ಮೊದಲು ಜಾರಿಗೆ ತಂದ ಎರಡು ರಾಜ್ಯಗಳು _____?

ಅ) ರಾಜಸ್ತಾನ ಮತ್ತು ಪಶ್ಚಿಮ ಬಂಗಾಳ

ಆ) ಪಶ್ಚಿಮ ಬಂಗಾಳ ಮತ್ತು ಕರ್ನಾಟಕ

ಇ) ಕರ್ನಾಟಕ ಮತ್ತು ರಾಜಸ್ತಾನ

ಈ) ಗುಜರಾತ್ ಮತ್ತು ತ್ರಿಪುರ

ಪಶ್ಚಿಮ ಬಂಗಾಳ ಮತ್ತು ಕರ್ನಾಟಕ

ಅಶೋಕ್ ಮೆಹ್ತಾ ಸಮಿತಿಯನ್ನು 1977 ರಲ್ಲಿ ಕೇಂದ್ರದಲ್ಲಿ ಆಡಳಿತದ ಚುಕ್ಕಾಣಿ ಹಿಡಿದಿದ್ದ ಮೊರಾರ್ಜಿ ದೇಸಾಯಿ ನೇತೃತ್ವದ ಜನತಾ ಸರ್ಕಾರ ನೇಮಿಸಿತ್ತು. ಮೆಹ್ತಾ ಸಮಿತಿಯು ಎರಡು ಹಂತದ ಪಂಚಾಯತ್ ವ್ಯವಸ್ಥೆ, ಪ್ರತಿ ಜಿಲ್ಲೆಗೊಂದು ಜಿಲ್ಲಾ ಪಂಚಾಯತ್, 20 ರಿಂದ 30 ಸಾವಿರ ಜನಸಂಖ್ಯೆಗೆ ಒಂದು ಮಂಡಲ ಪಂಚಾಯತ್ ಸ್ಥಾಪಿಸಲು

www.karunaduexams.com

ಶಿಫಾರಸ್ಸು ಮಾಡಿತ್ತು. ಕೇಂದ್ರ ಸರ್ಕಾರ ಪತನಗೊಂಡ ಕಾರಣ ಈ ಸಮಿತಿಯ ಶಿಫಾರಸ್ಸುಗಳು ಜಾರಿಗೆ ಬರಲಿಲ್ಲ. ಆದರೆ ಪಶ್ಚಿಮ ಬಂಗಾಳದಲ್ಲಿ ಅಂದು ಆಡಳಿತದಲ್ಲಿದ್ದ ಜ್ಯೋತಿಬಸು ನೇತೃತ್ವದ ಕಮ್ಯೂನಿಸ್ಟ್ ಸರ್ಕಾರ ಸಮಿತಿಯ ಶಿಫಾರಸ್ಸನ್ನು ಸ್ವೀಕರಿಸಿತು. ಅದೇ ರೀತಿ ಕರ್ನಾಟಕದಲ್ಲಿ ಗ್ರಾಮೀಣಭಿವೃದ್ಧಿ ಸಚಿವರಾಗಿದ್ದ ಅಬ್ದುಲ್ ನಜೀರ್ ಸಾಬ್ ಹಾಗೂ ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗ್ಗಡೆ ರವರ ದೂರದೃಷ್ಟಿಯಿಂದ ಅಶೋಕ್ ಮೆಹ್ತಾ ಸಮಿತಿಯ ಶಿಫಾರಸ್ಸನ್ನು ಅಂಗೀಕರಿಸಲಾಯಿತು. ಇದರ ಪರಿಣಾಮ ದಿ ಕರ್ನಾಟಕ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಕಾಯಿದೆ 1983 ರೂಪುಗೊಳ್ಳುತ್ತದೆ.

4. "ಸಫಾಯಿ ಕರ್ಮಚಾರಿಗಳ" ನಿಷೇದ ಮತ್ತು ಅವರ ಪುರ್ನವಸತಿ ಕಾಯಿದೆ-2013 ಜಾರಿಗೆ ಬಂದ ದಿನಾಂಕ____?

   ಅ) 6ನೇ ಡಿಸೆಂಬರ್ 2013

   ಆ) 15ನೇ ಆಗಸ್ಟ್ 2014

   ಇ) 10ನೇ ಅಕ್ಟೋಬರ್ 2013

   ಈ) 20ನೇ ನವೆಂಬರ್ 2013

   6ನೇ ಡಿಸೆಂಬರ್ 2013

   "ಸಫಾಯಿ ಕರ್ಮಚಾರಿಗಳ ನಿಷೇದ ಮತ್ತು ಅವರ ಪುರ್ನವಸತಿ ಕಾಯಿದೆ-2013" 6ನೇ ಡಿಸೆಂಬರ್ 2013 ರಿಂದ ಜಾರಿಗೆ ಬಂದಿದೆ.

5. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಉದ್ಯೋಗ ಬಯಸುವ ವ್ಯಕ್ತಿಯು ಈ ನಮೂನೆಯಲ್ಲಿ ಕೆಲಸಕ್ಕಾಗಿ ಅರ್ಜಿ ಸಲ್ಲಿಸಬೇಕು___?

   ಅ) ನಮೂನೆ-1

   ಆ) ನಮೂನೆ-3

   ಇ) ನಮೂನೆ-6

   ಈ) ನಮೂನೆ-8

   ನಮೂನೆ-6

   ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಉದ್ಯೋಗ ಬಯಸುವ ವ್ಯಕ್ತಿಯು ನಮೂನೆ-6 ರಲ್ಲಿ ಕೆಲಸಕ್ಕಾಗಿ ಅರ್ಜಿ ಸಲ್ಲಿಸಬೇಕು. ಈ ಯೋಜನೆಯಡಿ ಉದ್ಯೋಗ ಚೀಟಿ ಪಡೆಯಲು ನಮೂನೆ-1 ರಲ್ಲಿ ಅರ್ಜಿ ಸಲ್ಲಿಸಬೇಕು (ಗಮನಿಸಿ: ಉದ್ಯೋಗ ಚೀಟಿ ಪಡೆಯಲು ಬಿಳಿ ಹಾಳೆ ಮೇಲೆ ಬರೆದು ಪಂಚಾಯತಿಗೆ ನೀಡಿದರು ಸಹ ಅದನ್ನು ಮನ್ನಣೆ ಮಾಡಿ ಉದ್ಯೋಗ ಚೀಟಿ ನೀಡಬೇಕು). ಗ್ರಾಮ ಪಂಚಾಯತಿಯು ಕೆಲಸಕ್ಕಾಗಿ ಅರ್ಜಿ ನೀಡಿದವರಿಗೆ ಕೆಲಸಕ್ಕೆ ಹಾಜರಾಗಲು ನಮೂನೆ-8 ರಲ್ಲಿ ಆದೇಶ ನೀಡಬೇಕು.

www.karunaduexams.com

6. “ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ” ಯೋಜನೆಗೆ ಶಿಫಾರಸ್ಸು ಮಾಡಿದ ಸಮಿತಿ _____?

ಅ) ಅಶೋಕ್ ಮೆಹ್ತಾ ಸಮಿತಿ

ಆ) ಬಲವಂತ್ ರಾಯ್ ಮೆಹ್ತಾ ಸಮಿತಿ

ಇ) ಸಿಂಘ್ವಿ ಸಮಿತಿ

ಈ) ಜಿ ವಿ ಕೆ ರಾವ್ ಸಮಿತಿ

ಬಲವಂತ್ ರಾಯ್ ಮೆಹ್ತಾ ಸಮಿತಿ

ಬಲವಂತ್ ರಾಯ್ ಮೆಹ್ತಾ ಸಮಿತಿಯನ್ನು 1957 ರಲ್ಲಿ ರಚಿಸಲಾಗಿದೆ. ಸ್ಥಳೀಯ ಆಡಳಿತ ವ್ಯವಸ್ಥೆ ಸುಧಾರಣೆಯಲ್ಲಿ ಈ ಸಮಿತಿ ಬಹುಮುಖ್ಯ ಪಾತ್ರವಹಿಸಿದೆ. ಅತ್ಯಂತ ತೀಕ್ಷಣವಾದ ಪ್ರಜಾಸತ್ತಾತ್ಮಕ ಮತ್ತು ವಿಕೇಂದ್ರಿಕೃತ ಸ್ಥಳಿಯಾಡಳಿತ ವ್ಯವಸ್ಥೆಯ ಅವಶ್ಯಕತೆಯನ್ನು ಸಮಿತಿ ಶಿಫಾರಸ್ಸು ಮಾಡುತ್ತದೆ. ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸಮಿತಿ ಶಿಫಾರಸ್ಸು ಮಾಡಿದೆ.

7. ಗ್ರಾಮ ಪಂಚಾಯತಿ ನೇಮಕ ಮಾಡಿಕೊಂಡ ಯಾವುದೇ ನೌಕರನಿಗೆ ದಂಡ ವಿಧಿಸುವ, ವಾರ್ಷಿಕ ಬಡ್ತಿಯನ್ನು ತಡೆಯುವ ಅಧಿಕಾರ ಯಾರಿಗಿದೆ?

ಅ) ಅಧ್ಯಕ್ಷರು

ಆ) ಪಂಚಾಯತಿ ಅಭಿವೃದ್ಧಿ ಅಧಿಕಾರಿ

ಇ) ಕಾರ್ಯನಿರ್ವಾಹಣಾಧಿಕಾರಿ

ಈ) ಮುಖ್ಯಕಾರ್ಯನಿರ್ವಾಹಣಾಧಿಕಾರಿ

ಪಂಚಾಯತಿ ಅಭಿವೃದ್ಧಿ ಅಧಿಕಾರಿ

ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ತನ್ನ ಆದೇಶದ ಮೂಲಕ ಗ್ರಾಮ ಪಂಚಾಯತಿ ನೇಮಕ ಮಾಡಿಕೊಂಡ ಯಾವುದೇ ನೌಕರನಿಗೆ ದಂಡ ವಿಧಿಸಬಹುದು ಮತ್ತು ವಾರ್ಷಿಕ ಬಡ್ತಿಯನ್ನು ತಡೆಹಿಡಿಯಬಹುದು. [ಗಮನಿಸಿ: ಈ ಆದೇಶದ ವಿರುದ್ಧ ಆರೋಪಿತ ನೌಕರನು ಕಾರ್ಯನಿರ್ವಾಹಣಾಧಿಕಾರಿಗೆ ಅಪೀಲು ಸಲ್ಲಿಸಬೇಕು]. ಇಲ್ಲಿ ಗಮನಿಸಿ ಗ್ರಾಮ ಪಂಚಾಯತಿಯ ತಾನು ನೇಮಕ ಮಾಡಿದ ನೌಕರರನ್ನ ವಜಾಮಾಡುವ ಅಧಿಕಾರ ಹೊಂದಿದೆ (ಅಂದರೆ ವಜಾ ಮಾಡುವ ಅಧಿಕಾರ ಗ್ರಾ.ಪಂಚಾಯತಿಗೆ ಮಾತ್ರ ಇದೆ ಪಿ.ಡಿ,ಒಗೆ ಅಲ್ಲ). ಈ ರೀತಿ ವಜಾಗೊಂಡ ನೌಕರ ಈ ಆದೇಶದ ವಿರುದ್ಧ ಮುಖ್ಯಕಾರ್ಯನಿರ್ವಾಹಣಾಧಿಕಾರಿಗೆ ಅಪೀಲು ಸಲ್ಲಿಸಬೇಕು [So ದಂಡ ಅಥವಾ ವೇತನ ಬಡ್ತಿಹಿಡಿದಾಗ ಕಾರ್ಯನಿರ್ವಾಹಣಾಧಿಕಾರಿ, ದರ್ಜೆಯಿಂದ ಕೆಳಗಿಳಿಸಿದಾಗ ಅಥವಾ ವಜಾಗೊಂಡಾಗ ಮುಖ್ಯಕಾರ್ಯನಿರ್ವಾಹಣಾಧಿಕಾರಿಗೆ ಅಪೀಲು ಸಲ್ಲಿಸಬೇಕು].

8. ಇವರನ್ನು ಭಾರತದ “ಸ್ಥಳೀಯ ಸರ್ಕಾರದ ಪಿತಾಮಹ” ಎಂದು ಕರೆಯಲಾಗುತ್ತದೆ _____?

ಅ) ಬಲವಂತ್ ರಾಯ್ ಮೆಹ್ತಾ

www.karunaduexams.com

ಆ) ಲಾರ್ಡ್ ರಿಪ್ಪನ್

ಇ) ಲಾರ್ಡ್ ಮೆಂಟೊ

ಈ) ಲಾರ್ಡ್ ಕಾರ್ನವಾಲೀಸ್

ಲಾರ್ಡ್ ರಿಪ್ಪನ್

ಲಾರ್ಡ್ ರಿಪ್ಪನ್ ಅವರು ಭಾರತದ ವೈಸ್ ರಾಯ್ ಆದ ಕಾಲದಲ್ಲಿ ಸ್ಥಳೀಯ ಆಡಳಿತ ವ್ಯವಸ್ಥೆ ಜಾರಿಗೆ ತರಲು ಅನೇಕ ಕ್ರಮಗಳನ್ನು ಕೈಗೊಳ್ಳಲಾಯಿತು. ಆದ್ದರಿಂದ ಇವರನ್ನು ಭಾರತದ "ಸ್ಥಳೀಯ ಸರ್ಕಾರದ ಪಿತಾಮಹ ಎನ್ನಲಾಗುತ್ತದೆ. 1862 ರಿಂದ 1903 ಕಾಲಘಟ್ಟವನ್ನು ಆಧುನಿಕ ಸ್ಥಳೀಯಾಡಳಿತ ವ್ಯವಸ್ಥೆಯ ಉತ್ತುಂಗ ಎನ್ನಲಾಗುತ್ತಿದೆ.

9. ಮೈಸೂರು ರಾಜ್ಯದಲ್ಲಿ ರಚಿಸಲಾದ "ವೆಂಕಟಪ್ಪ ಸಮಿತಿ" ಸಂಬಂಧಿಸಿದ ಶಿಫಾರಸ್ಸುಗಳಲ್ಲಿ ಯಾವುದು ತಪ್ಪಾಗಿದೆ?

ಅ) ಎರಡು ಹಂತದ ಸ್ಥಳೀಯಾಡಳಿತ ವ್ಯವಸ್ಥೆ ಜಾರಿಗೆ ತರುವುದು

ಆ) ಗ್ರೂಪ್ ಪಂಚಾಯತಿ ಸದಸ್ಯರಾಗಲು ಕನಿಷ್ಠ 20 ವರ್ಷ ದಾಟಿರಬೇಕು

ಇ) ಕನಿಷ್ಟ 2000 ದಿಂದ ಗರಿಷ್ಟ 5000 ಜನಸಂಖ್ಯೆಗೆ ಗ್ರೂಪ್ ಪಂಚಾಯತಿ ರಚನೆ

ಈ) ಅಧಿಕಾರವದಿ ನಾಲ್ಕು ವರ್ಷ ಇರಬೇಕು

ಗ್ರೂಪ್ ಪಂಚಾಯತಿ ಸದಸ್ಯರಾಗಲು ಕನಿಷ್ಠ 20 ವರ್ಷ ದಾಟಿರಬೇಕು

ಮೈಸೂರು ರಾಜ್ಯದಲ್ಲಿ ವೆಂಕಟಪ್ಪ ಸಮಿತಿಯನ್ನು 1949 ರಲ್ಲಿ ರಚಿಸಲಾಗಿದೆ. ಈ ಸಮಿತಿ ಎರಡು ಹಂತದ ಪಂಚಾಯತ್ ವ್ಯವಸ್ಥೆಗೆ ಶಿಫಾರಸ್ಸು ಮಾಡಿತು. ಮೇಲಿನ ಹೇಳಿಕೆಗಳಲ್ಲಿ ಗ್ರೂಪ್ ಪಂಚಾಯತಿ ಸದಸ್ಯರಾಗಲು ಕನಿಷ್ಠ 20 ವರ್ಷ ದಾಟಿರಬೇಕು ಎಂಬುದನ್ನು ಹೊರತುಪಡಿಸಿ ಎಲ್ಲಾ ಹೇಳಿಕೆಗಳು ಸರಿಯಾಗಿವೆ. ಈ ಸಮಿತಿಯು ಗ್ರೂಪ್ ಪಂಚಾಯತಿ ಸದಸ್ಯರಾಗಲು ಕನಿಷ್ಠ 25 ವರ್ಷ ದಾಟಿರಬೇಕೆಂದು ಶಿಫಾರಸ್ಸು ಮಾಡಿದೆ.

10. ಸುರೇಶ್ ಮತ್ತು ನಿರ್ಮಲಾ ದಂಪತಿ ವ್ಯವಸಾಯ ಮಾಡುತ್ತಿದ್ದು, ಈ ದಂಪತಿಗೆ ಮೂರು ಮಕ್ಕಳಿದ್ದಾರೆ. ಮೊದಲನೇ ಮಗ ರವಿ 20 ವರ್ಷ ತುಂಬಿದ್ದು ಕೂಲಿ ಕೆಲಸ ಮಾಡುತ್ತಿದ್ದಾನೆ. ಎರಡನೇ ಮಗ ಚಂದ್ರ ಕಾಲೇಜನಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ. ಮಗಳು ಶೃತಿ 17 ವರ್ಷ ತುಂಬಿದ್ದು ಶಾಲೆ ಬಿಟ್ಟು ಮನೆಯಲ್ಲಿ ಉಳಿದಿದ್ದಾರೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಈ ಮೇಲಿನ ಯಾರು ಉದ್ಯೋಗ ಚೀಟಿ ಪಡೆಯಲು ಅರ್ಹರಾಗಿರುತ್ತಾರೆ.

ಅ) ಸುರೇಶ್ ಮತ್ತು ನಿರ್ಮಲಾ ಮಾತ್ರ

ಆ) ಸುರೇಶ್, ನಿರ್ಮಲಾ ಮತ್ತು ರವಿ

ಇ) ಸುರೇಶ್, ನಿರ್ಮಲಾ, ರವಿ ಮತ್ತು ಶೃತಿ

ಈ) ಮೇಲಿನ ಎಲ್ಲರೂ ಅರ್ಹರು

ಸುರೇಶ್, ನಿರ್ಮಲಾ ಮತ್ತು ರವಿ

www.karunaduexams.com

ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ನಿರ್ವಹಿಸಲು ಬಯಸುವ ಕುಟುಂಬವು ಉದ್ಯೋಗ ಚೀಟಿ ಪಡೆಯುವುದು ಕಡ್ಡಾಯ. ಉದ್ಯೋಗ ಚೀಟಿಯಲ್ಲಿ ನೋಂದಾಯಿಸಿಕೊಳ್ಳುವ ಕುಟುಂಬದ ಸದಸ್ಯರಿಗೆ ಕಡ್ಡಾಯವಾಗಿ **18** ವರ್ಷ ತುಂಬಿರಬೇಕು ಮತ್ತು 60 ವರ್ಷ ಮೇಲ್ಪಟ್ಟವರು ಅನರ್ಹರಾಗಿರುತ್ತಾರೆ. 18 ವರ್ಷ ತುಂಬಿದ್ದು, ವಿದ್ಯಾಭ್ಯಾಸ ಮಾಡುತ್ತಿರುವ ಸದಸ್ಯರು ಉದ್ಯೋಗ ಚೀಟಿಯಲ್ಲಿ ನೋಂದಾಯಿಸಿಕೊಳ್ಳಲು ಅನರ್ಹರಾಗಿರುತ್ತಾರೆ. ಆದ್ದರಿಂದ ಮೇಲಿನ ಪ್ರಶ್ನೆಯಲ್ಲಿ ಸುರೇಶ್ ದಂಪತಿ ಮತ್ತು ಮಗ ರವಿ ಅರ್ಹರಾಗಿದ್ದಾರೆ. ಚಂದ್ರ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವುದರಿಂದ ಮತ್ತು ಶೃತಿ ಶಾಲೆ ಬಿಟ್ಟಿದ್ದರು 18 ವರ್ಷ ಆಗಿರದ ಕಾರಣ ಉದ್ಯೋಗ ಚೀಟಿಯಲ್ಲಿ ನೊಂದಾಯಿಸಿಕೊಳ್ಳಲು ಅನರ್ಹರು.

11. “ದಿ ಮೈಸೂರು ವಿಲೇಜ್ ಪಂಚಾಯತ್ ಮತ್ತು ಡಿಸ್ಟ್ರಿಕ್ ಬೋರ್ಡ್ ಕಾಯಿದೆ ಜಾರಿಗೆ ಬಂದ ವರ್ಷ ____?

ಅ) 1950

ಆ) 1952

ಇ) 1955

ಈ) 1953

1952

ದಿ ಮೈಸೂರು ವಿಲೇಜ್ ಪಂಚಾಯತ್ ಮತ್ತು ಡಿಸ್ಟ್ರಿಕ್ ಬೋರ್ಡ್ ಕಾಯಿದೆ 1952 ಫೆಬ್ರವರಿ 14 ರಿಂದ ಜಾರಿಗೆ ಬಂದಿದೆ. ಆದರೆ ಇದು ಸರಿಯಾಗಿ ಅನುಷ್ಠಾನಗೊಳ್ಳಲಿಲ್ಲ. ಅನಂತರ ದಿ ಮೈಸೂರು ವಿಲೇಜ್ ಪಂಚಾಯತ್ ಮತ್ತು ಲೋಕಲ್ ಬೋರ್ಡ್ ಕಾಯಿದೆ 1959 ರಿಂದ ಜಾರಿಗೆ ಬಂದಿತು.

12. ಈ ಕೆಳಗಿನ ಯಾವ ಸಮಿತಿ ಸ್ವಯಂ ಆಡಳಿತ ಸಂಸ್ಥೆಗಳಿಗೆ ಸಂವಿಧಾನಬದ್ಧ ಮಾನ್ಯತೆ ಸಿಗಬೇಕು ಎಂದು ಶಿಫಾರಸ್ಸು ಮಾಡಿತ್ತು?

ಅ) ಬಲವಂತ್ ರಾಯ್ ಮೆಹ್ತಾ ಸಮಿತಿ

ಆ) ಅಶೋಕ್ ಮೆಹ್ತಾ ಸಮಿತಿ

ಇ) ಜಿ ವಿ ಕೆ ರಾವ್ ಸಮಿತಿ

ಈ) ಎಲ್ ಎಂ ಸಿಂಘ್ವಿ ಸಮಿತಿ

ಎಲ್ ಎಂ ಸಿಂಘ್ವಿ ಸಮಿತಿ

ಡಾ. ಎಲ್.ಎಂ. ಸಿಂಘ್ವಿ ಸಮಿತಿಯನ್ನು 1986ರಲ್ಲಿ ರಚಿಸಲಾಯಿತು. ಸಿಂಘ್ವಿ ಸಮಿತಿಯು ಪಂಚಾಯತಿ ರಾಜ್'ಗೆ ಸಾಂವಿಧಾನಿಕವಾಗಿ ರಕ್ಷಣೆ ಕೊಡಲು ಶಿಫಾರಸು ಮಾಡಿತು. ಸಂವಿಧಾನದಲ್ಲಿ ಹೊಸ ಅಧ್ಯಾಯವನ್ನು ನಿಯಮವನ್ನು ರೂಪಿಸಲು ತಿದ್ದುಪಡಿ ಮಾಡಬೇಕು, ಅಧಿಕಾರ ಮತ್ತು ಕ್ರಿಯೆಗಳನ್ನು ರೂಪಿಸಬೇಕು, ಚುನಾವಣಾ ಆಯೋಗದ ಮೂಲಕ ಸಮಿತಿ ರಚಿಸಲು ನ್ಯಾಯಯುತ ಚುನಾವಣೆ ನಡೆಸಬೇಕೆಂದು ಶಿಫಾರಸ್ಸು ಮಾಡಿತು.

www.karunaduexams.com

13. MGNREGA ಯೋಜನೆಯಡಿ ನಿರುದ್ಯೋಗ ಭತ್ಯೆಯನ್ನು ಯಾರು ಭರಿಸಬೇಕು?

ಅ) ರಾಜ್ಯ ಸರ್ಕಾರ

ಆ) ಗ್ರಾಮ ಪಂಚಾಯತಿ

ಇ) ನಿರುದ್ಯೋಗ ಭತ್ಯೆ ಸಂದರ್ಭಕ್ಕೆ ಕಾರಣರಾದವರು

ಈ) ಜಿಲ್ಲಾ ಪಂಚಾಯತಿ

ನಿರುದ್ಯೋಗ ಭತ್ಯೆ ಸಂದರ್ಭಕ್ಕೆ ಕಾರಣರಾದವರು

ಯೋಜನೆಯಡಿ ಅರ್ಜಿ ಸಲ್ಲಿಸಿದ ಕುಟುಂಬಕ್ಕೆ ಹದಿನೈದು ದಿನದೊಳಗೆ ಕೆಲಸ ನೀಡದಿದ್ದಾರೆ ಕೆಲಸ ನೀಡಬೇಕಾದ ಅಧಿಕಾರಿ (ಅನುಷ್ಠಾನ ಅಧಿಕಾರಿ) ಸಂಬಳದಿಂದ ನಿರುದ್ಯೋಗ ಭತ್ಯೆಯನ್ನು ಪಾವತಿಬೇಕಾಗುತ್ತದೆ. ಗ್ರಾಮ ಪಂಚಾಯತಿಗಳಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಅನುಷ್ಠಾನ ಅಧಿಕಾರಿಯಾಗಿರುತ್ತಾನೆ.

14. ಗ್ರಾಮ ಪಂಚಾಯತಿಗಳು ಕಟ್ಟಡಗಳ ಮೇಲೆ ವಾರ್ಷಿಕ ಬಾಡಿಗೆ ಮೌಲ್ಯದ ಶೇ ___ ರಷ್ಟು ಕಟ್ಟಡಗಳ ತೆರಿಗೆಯೆಂದು ವಸೂಲಿ ಮಾಡಬಹುದು?

ಅ) ಶೇ 5%

ಆ) ಶೇ 10%

ಇ) ಶೇ 15%

ಈ) ಶೇ 20%

ಶೇ 10%

ಗ್ರಾಮ ಪಂಚಾಯತಿಗಳು ಕಟ್ಟಡಗಳ ಮೇಲೆ ವಾರ್ಷಿಕ ಬಾಡಿಗೆ ಮೌಲ್ಯದ ಶೇ 10ರಷ್ಟು ಕಟ್ಟಡಗಳ ತೆರಿಗೆಯೆಂದು ವಸೂಲಿ ಮಾಡಬಹುದು.

15. ಪ್ರಸ್ತುತ MGNREGA ಯೋಜನೆಯಡಿ ಕರ್ನಾಟಕದಲ್ಲಿ ಪ್ರತಿ ದಿನಕ್ಕೆ ಪ್ರತಿ ವ್ಯಕ್ತಿಗೆ ನೀಡುತ್ತಿರುವ ಕೂಲಿ ಹಣ ಎಷ್ಟು?

ಅ) ರೂ 220

ಆ) ರೂ 224

ಇ) ರೂ 256

ಈ) ರೂ 243

ರೂ 224

ಪ್ರಸ್ತುತ ಕರ್ನಾಟಕದಲ್ಲಿ MGNREGA ಯೋಜನೆಯಡಿ ಕರ್ನಾಟಕದಲ್ಲಿ ಪ್ರತಿ ದಿನಕ್ಕೆ ಪ್ರತಿ ವ್ಯಕ್ತಿಗೆ ರೂ 224/ ಕೂಲಿಯನ್ನು ನೀಡಲಾಗುತ್ತಿದೆ. ಯೋಜನೆಯಡಿ ಗಂಡು ಹೆಣ್ಣಿಗೆ ಸಮಾನ ಕೂಲಿ ನೀಡಬೇಕು. ಗಮನಿಸಿ ಯೋಜನೆಯಡಿ

www.karunaduexams.com

ಕೂಲಿ ದರ ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸವಿರುತ್ತದೆ. ಉದಾಹರಣೆ ಹರಿಯಾಣದಲ್ಲಿ ರೂ 249 ಇದ್ದರೆ, ಆಂಧ್ರಪ್ರದೇಶದಲ್ಲಿ ರೂ 174 ಇದೆ.

16. ಗ್ರಾಮ ಪಂಚಾಯತಿಯಲ್ಲಿ ನಿರ್ವಹಿಸಬೇಕಾದ ವಹಿಗಳ ಸಂಖ್ಯೆ ಎಷ್ಟು?

ಅ) 29

ಆ) 34

ಇ) 39

ಈ) 43

43

ಗ್ರಾಮ ಪಂಚಾಯತಿಯಲ್ಲಿ ನಿರ್ವಹಿಸಬೇಕಾದ ವಹಿಗಳ ಸಂಖ್ಯೆ 43.

17. MGNREGA ಯೋಜನೆಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ತಪ್ಪಾಗಿದೆ?

ಅ) ಇದು ಬೇಡಿಕೆ ಆಧರಿತ ಯೋಜನೆಯಾಗಿದೆ

ಆ) ದೀರ್ಘಕಾಲ ಬಾಳಿಕೆ ಬರುವ ಆಸ್ತಿಗಳ ಸೃಜನೆ ಯೋಜನೆಯ ಉದ್ದೇಶಗಳಲ್ಲೊಂದು

ಇ) ಉದ್ಯೋಗ ಚೀಟಿಯನ್ನು ಒಂದಕ್ಕಿಂತ ಹೆಚ್ಚು ಗ್ರಾಮ ಪಂಚಾಯತಿಗಳಲ್ಲಿ ಪಡೆಯಬಹುದು

ಈ) ಇದರಡಿ ಉದ್ಯೋಗ ಬಯಸುವವರು ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಬೇಕು

ಹೇಳಿಕೆ ಇ ಅನ್ನು ಹೊರತುಪಡಿಸಿ ಮೇಲಿನ ಎಲ್ಲಾ ಹೇಳಿಕೆಗಳು ಸರಿ. ಉದ್ಯೋಗ ಚೀಟಿಯನ್ನು ಒಂದಕ್ಕಿಂತ ಹೆಚ್ಚು ಗ್ರಾಮ ಪಂಚಾಯತಿಗಳಲ್ಲಿ ಪಡೆಯಲು ಸಾಧ್ಯವಿಲ್ಲ. ಉದಾಹರಣೆ ನೀವಿರುವ ಗ್ರಾಮವು "X" ಪಂಚಾಯತಿಗೆ ಸೇರಿದೆ ಎಂದರೆ ನೀವು ಉದ್ಯೋಗ ಚೀಟಿಯನ್ನು X ಪಂಚಾಯತಿಯಲ್ಲಿ ಮಾತ್ರ ಪಡೆಯಬಹುದು.

18. ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ/ಹೇಳಿಕೆಗಳು ಯಾವುವು?

I) ಗ್ರಾಮ ಪಂಚಾಯತಿ ಅಧ್ಯಕ್ಷರು ತಮ್ಮ ರಾಜೀನಾಮೆಯನ್ನು ಉಪ ವಿಭಾಗಧಿಕಾರಿಗಳಿಗೆ ನೀಡಬೇಕು

II) ಗ್ರಾಮ ಪಂಚಾಯತಿ ಉಪಾಧ್ಯಕ್ಷರು ಮತ್ತು ಸದಸ್ಯರು ತಮ್ಮ ರಾಜೀನಾಮೆಯನ್ನ ಅಧ್ಯಕ್ಷರಿಗೆ ನೀಡಬೇಕು

ಸರಿಯಾದ ಉತ್ತರವನ್ನು ಈ ಕೆಳಗೆ ನೀಡಿರುವ ಕೋಡ್ ಮೂಲಕ ಗುರುತಿಸಿ:

ಅ) ಹೇಳಿಕೆ I ಮಾತ್ರ

ಆ) ಹೇಳಿಕೆ II ಮಾತ್ರ

ಇ) ಎರಡು ಹೇಳಿಕೆ ಸರಿಯಾಗಿವೆ

ಈ) ಎರಡು ಹೇಳಿಕೆ ತಪ್ಪಾಗಿವೆ

ಮೇಲಿನ ಎರಡು ಹೇಳಿಕೆಗಳು ಸರಿ



www.karunaduexams.com

ಎರಡು ಹೇಳಿಕೆ ಸರಿಯಾಗಿವೆ ಗ್ರಾಮ ಪಂಚಾಯತಿ ಅಧ್ಯಕ್ಷರು ತಮ್ಮ ರಾಜೀನಾಮೆಯನ್ನು ಉಪ ವಿಭಾಗಧಿಕಾರಿಗಳಿಗೆ ನೀಡಬೇಕು. ಗ್ರಾಮ ಪಂಚಾಯತಿ ಉಪಾಧ್ಯಕ್ಷರು ಮತ್ತು ಸದಸ್ಯರು ತಮ್ಮ ರಾಜೀನಾಮೆಯನ್ನ ಅಧ್ಯಕ್ಷರಿಗೆ ನೀಡಬೇಕು. ಹದಿನೈದು ದಿನದೊಳಗೆ ವಾಪಸ್ಸು ಪಡೆಯದಿದ್ದರೆ ಅರ್ಜಿ ಸ್ವೀಕೃತಿ ಎಂದು ಪರಿಗಣಿಸಲಾಗುವುದು.

19. ಈ ಕೆಳಗಿನ ಯಾವ ಸಂಧರ್ಭದಲ್ಲಿ ಗ್ರಾಮ ಪಂಚಾಯತಿ ಸದಸ್ಯರನ್ನು ತೆಗೆದುಹಾಕಬಹುದು?

I) ವೈದ್ಯಕೀಯವಾಗಿ ಅಸಮರ್ಥನಾದಾಗ

II) ದುರ್ನಡತೆಯ ತಪ್ಪಿತಸ್ಥನಾದಾಗ

III) ಅಸ್ವಸ್ಥಚಿತ್ತವನಾದ ಸಂದರ್ಭದಲ್ಲಿ

IV) ಮೂರು ಒಂದಾದ ಮೇಲೊಂದರಂತೆ ಸಭೆಗಳಿಗೆ ಗೈರುಹಾಜರಾದರೆ

ಈ ಕೆಳಗೆ ನೀಡಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಗುರುತಿಸಿ:

ಅ) I, II & III

ಆ) II, III & IV

ಇ) I, III & IV

ಈ) I, II, III

I, II & III

ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43ಎ ರಡಿ ಸದಸ್ಯರನ್ನು ತೆಗೆದುಹಾಕುವ ಬಗ್ಗೆ ವಿವರಿಸಲಾಗಿದೆ (ಈ ಪ್ರಕರಣಕ್ಕೆ 2015 ರಲ್ಲಿ ತಿದ್ದುಪಡಿ ತಂದು ಮೇಲಿನ ಹೇಳಿಕೆಗಳನ್ನು ಸೇರಿಸಲಾಗಿದೆ). ಮೇಲಿನ ಹೇಳಿಕೆಗಳಲ್ಲಿ ಹೇಳಿಕೆ 4 ತಪ್ಪಾಗಿದೆ. ಸದಸ್ಯನು ನಾಲ್ಕು ಒಂದಾದ ಮೇಲೊಂದರಂತೆ ಸಭೆಗಳಿಗೆ ಗೈರುಹಾಜರಾದರೆ ಅನರ್ಹಗೊಳಿಸಬಹುದು. ಅದೇ ರೀತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸಭೆಯನ್ನು ಕರೆಯಬೇಕಿದ್ದಾಗ, ಒಂದರ ಮೇಲೊಂದರಂತೆ ಎರಡು ಸಭೆಗಳನ್ನು ಕರೆಯಲು ತಪ್ಪಿದರೆ ಅನರ್ಹಗೊಳಿಸಬಹುದು.

20. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕ್ರಿಯಾ ಯೋಜನೆ ತಯಾರಿಸುವ ಮುನ್ನ ಈ ತಂತ್ರಾಂಶದಲ್ಲಿ ಕಾಮಗಾರಿಗಳನ್ನು ಮೊದಲು ತುಂಬಬೇಕು ____?

ಅ) ಪಂಚತಂತ್ರ

ಆ) ಎಂಡ್2ಎಂಡ್

ಇ) ಪಂಚಮಿತ್ರ

ಈ) ಎಂಜಿಎನ್ಆರ್ ಜಿಎ

ಎಂಡ್2ಎಂಡ್

www.karunaduexams.com

ಎಂಡ್2ಎಂಡ್ ನರೇಗಾ(END2ENDNREGA) ವೆಬ್ ಸೈಟ್ ನಲ್ಲಿ ವಾರ್ಡ್ ಸಭೆ ಮತ್ತು ಗ್ರಾಮ ಸಭೆಯಲ್ಲಿ ಆಯ್ಕೆಯಾದ ಕಾಮಗಾರಿಗಳನ್ನು ಮೊದಲು ತುಂಬಿಸಿ ನಂತರ ಕ್ರಿಯಾ ಯೋಜನೆಯನ್ನು ತಯಾರಿಸಬೇಕು.

21. ಈ ಕೆಳಗಿನ ಹೇಳಿಕೆಗಳಲ್ಲಿ ತಪ್ಪಾಗಿರುವ ಹೇಳಿಕೆ ಯಾವುದು?

ಅ) ಸಂವಿಧಾನದ 73ನೇ ತಿದ್ದುಪಡಿ ಏಪ್ರಿಲ್ 24, 1993 ರಿಂದ ಜಾರಿಗೆ ಬಂದಿದೆ

ಆ) ಸಂವಿಧಾನದ 73ನೇ ತಿದ್ದುಪಡಿ ಜಾರಿಗೆ ಬಂದಾಗ ರಾಜೀವ್ ಗಾಂಧಿ ಪ್ರಧಾನಿಯಾಗಿದ್ದರು

ಇ) 73ನೇ ತಿದ್ದುಪಡಿ ಮೂಲಕ ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯನ್ನುಅಳವಡಿಸಿಕೊಳ್ಳಲಾಗಿದೆ

ಈ) ಸಂವಿಧಾನದ 9ನೇ ಅಧ್ಯಾಯನದಲ್ಲಿ ಈ ತಿದ್ದುಪಡಿಯನ್ನು ಅಳವಡಿಸಲಾಗಿದೆ

ಸಂವಿಧಾನದ 73ನೇ ತಿದ್ದುಪಡಿ ಜಾರಿಗೆ ಬಂದಾಗ ರಾಜೀವ್ ಗಾಂಧಿ ಪ್ರಧಾನಿಯಾಗಿದ್ದರು

ಸಂವಿಧಾನದ 73ನೇ ತಿದ್ದುಪಡಿ ಜಾರಿಗೆ ಬಂದಾಗ ಪಿ ವಿ ನರಸಿಂಹರಾವ್ ಅವರು ಪ್ರಧಾನಿಯಾಗಿದ್ದರು.

22. "ಸಫಾಯಿ ಕರ್ಮಚಾರಿ" ಎಂದರೆ _____?

ಅ) ಚರಂಡಿಯನ್ನು ಸ್ವಚ್ಛ ಮಾಡುವವ

ಆ) ದೈಹಿಕವಾಗಿ ಮನುಷ್ಯರ ಮಲವನ್ನು ಹೊರುವವ/ಸ್ವಚ್ಛಗೊಳಿಸುವವ

ಇ) ಚರ್ಮ ಕೆಲಸ ಮಾಡುವವ

ಈ) ಕಲ್ಲು ಗಣಿಯಲ್ಲಿ ಕೆಲಸ ಮಾಡುವವ

ದೈಹಿಕವಾಗಿ ಮನುಷ್ಯರ ಮಲವನ್ನು ಹೊರುವವ/ಸ್ವಚ್ಛಗೊಳಿಸುವವ

ಸಫಾಯಿ ಕರ್ಮಚಾರಿ ದೈಹಿಕವಾಗಿ ಮನುಷ್ಯರ ಮಲವನ್ನು ಹೊರುವವ/ಸ್ವಚ್ಛಗೊಳಿಸುವವ, ಪ್ರಾಣಿಗಳ ಮಲವನ್ನು ಸ್ವಚ್ಛಗೊಳಿಸುವವ ಮತ್ತು ರೈಲ್ವೆ ಹಳಿಗಳ ಮೇಲೆ ಮಲವನ್ನು ಸ್ವಚ್ಛಗೊಳಿಸುವವ ಹಾಗೂ ಹೊರುವವ ಎಂದರ್ಥ. ಮಲ ಹೊರಲು ಅಥವಾ ಸ್ವಚ್ಛಗೊಳಿಸಲು ಮಾನವರನ್ನು ಬಳಸಿಕೊಳ್ಳುವುದು ಕಾನೂನು ಅಪರಾಧ. ಸಫಾಯಿ ಕರ್ಮಚಾರಿಗಳ ಸಮೀಕ್ಷೆ ನಡೆಸುವುದು ಗ್ರಾಮ ಪಂಚಾಯತಿಯ ಹೊಣೆ.

23. ಭಾರತ ಸಂವಿಧಾನದ ಅಧಿಸೂಚಿ 11 ರಡಿ ಎಷ್ಟು ಕಾರ್ಯಕ್ರಮಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳು ನಿರ್ವಹಿಸಬೇಕಿದೆ?

ಅ) 26

ಆ) 29

ಇ) 32

ಈ) 33

29

www.karunaduexams.com

ಭಾರತ ಸಂವಿಧಾನದ ಅಧಿಸೂಚಿ 11 ರಡಿ 29 ಕಾರ್ಯಕ್ರಮಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳು ನಿರ್ವಹಿಸಬೇಕು.

24. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

I) 73ನೇ ತಿದ್ದುಪಡಿ ಕಾಯಿದೆಯ 243-ಜಿ ವಿಧಿಯ ಪ್ರಕಾರ ರಾಜ್ಯ ಹಣಕಾಸು ಆಯೋಗ ರಚಿಸಬೇಕು

II) ರಾಜ್ಯ ಹಣಕಾಸು ಆಯೋಗವನ್ನು ರಾಜ್ಯ ಸರ್ಕಾರ ಪ್ರತಿ ಐದು ವರ್ಷಗಳಿಗೊಮ್ಮೆ ರಚಿಸಬೇಕು

III) ಕರ್ನಾಟಕದಲ್ಲಿ ಇದುವರೆಗೂ ನಾಲ್ಕು ರಾಜ್ಯ ಹಣಕಾಸು ಆಯೋಗವನ್ನು ರಚಿಸಲಾಗಿದೆ

ಮೇಲಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆಗಳು ಯಾವುವು?

ಅ) I ಮಾತ್ರ

ಆ) II ಮಾತ್ರ

ಇ) III ಮಾತ್ರ

ಈ) ಮೇಲಿನ ಎಲ್ಲವೂ ಸರಿಯಾಗಿವೆ

III ಮಾತ್ರ

ಮೇಲಿನ ಹೇಳಿಕೆಗಳಲ್ಲಿ ಹೇಳಿಕೆ 1 ಮತ್ತು 2 ತಪ್ಪಾಗಿವೆ. 73ನೇ ತಿದ್ದುಪಡಿ ಕಾಯಿದೆಯ 243-ಐ ವಿಧಿಯ ಪ್ರಕಾರ ರಾಜ್ಯ ಹಣಕಾಸು ಆಯೋಗ ರಚಿಸಬೇಕು. ರಾಜ್ಯ ಹಣಕಾಸು ಆಯೋಗವನ್ನು ರಾಜ್ಯಪಾಲರು ಪ್ರತಿ ಐದು ವರ್ಷಗಳಿಗೊಮ್ಮೆ ರಚಿಸಬೇಕು.

25. MGNREGA ಯೋಜನೆಯಡಿ ಒಂದು ವರ್ಷದಲ್ಲಿ ಎಷ್ಟು ಹಣವನ್ನು ಆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅಕುಶಲ ಕೂಲಿಗಾಗಿ ಖರ್ಚು ಮಾಡಬಹುದಾಗಿದೆ?

ಅ) ಗ್ರಾಮ ಪಂಚಾಯಿತಿ ಅನುದಾನದ ಶೇ.50ಕ್ಕೆ ಮೀರದಂತೆ

ಆ) ಗ್ರಾಮ ಪಂಚಾಯಿತಿ ಅನುದಾನದ ಶೇ.60ಕ್ಕೆ ಮೀರದಂತೆ

ಇ) ಯಾವುದೇ ಮಿತಿಯಿಲ್ಲ

ಈ) ಹಿಂದಿನ ವರ್ಷದ ಕೂಲಿಕಾರರ ಸರಾಸರಿ ಲೆಕ್ಕಾಚಾರದಂತೆ

ಗ್ರಾಮ ಪಂಚಾಯಿತಿ ಅನುದಾನದ ಶೇ.50ಕ್ಕೆ ಮೀರದಂತೆ

MGNREGA ಯೋಜನೆಯಡಿ ಒಂದು ವರ್ಷದಲ್ಲಿ ಗ್ರಾಮ ಪಂಚಾಯಿತಿ ಅನುದಾನದ ಶೇ.50ಕ್ಕೆ ಮೀರದಂತೆ ಆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅಕುಶಲ ಕೂಲಿಗಾಗಿ ಖರ್ಚು ಮಾಡಬಹುದಾಗಿದೆ.

26. ಈ ಕೆಳಗಿನ ಯಾವುದು ಕರ್ನಾಟಕದಲ್ಲಿ ಪಂಚಾಯತ್ ರಾಜ್ಯ ವ್ಯವಸ್ಥೆ ಸಂಬಂಧಿಸಿದಂತೆ ರಚಿಸಲಾಗಿದ್ದ ಸಮಿತಿ ಆಗಿಲ್ಲ?

ಅ) ವೆಂಕಟಪ್ಪ ಸಮಿತಿ-1950

ಆ) ಚಂದ್ರಶೇಖರಯ್ಯ ಸಮಿತಿ-1954

www.karunaduexams.com

ಇ) ಕೊಂಡಜ್ಜ ಬಸಪ್ಪ ಸಮಿತಿ-1963

ಈ) ಅಬ್ದುಲ್ ನಜೀರ್ ಸಾಬ್ ಸಮಿತಿ-1970

ಅಬ್ದುಲ್ ನಜೀರ್ ಸಾಬ್ ಸಮಿತಿ-1970

ಅಬ್ದುಲ್ ನಜೀರ್ ಸಾಬ್ ಸಮಿತಿ-1970 ಎನ್ನುವ ಸಮಿತಿ ರಚನೆಯೇ ಆಗಿಲ್ಲ.

27. ಈ ಕೆಳಗಿನ ಯಾವುದು ಸ್ವಚ್ಚ ಭಾರತ ಅಭಿಯಾನ ಸಂಬಂಧಿಸಿದ ಸಹಾಯವಾಣಿಯಾಗಿದೆ?

ಅ) 1950

ಆ) 1965

ಇ) 1969

ಈ) 1972

1969

ಕೇಂದ್ರ ಸರ್ಕಾರ ಸ್ವಚ್ಚ ಭಾರತ ಅಭಿಯಾನದ ಮಾಹಿತಿ ಪಡೆಯಲು ಮತ್ತು ತಮ್ಮ ಅರ್ಜಿ ಸ್ಥಿತಿ ತಿಳಿಯು 1969 ಸಹಾಯವಾಣಿಯನ್ನು ಆರಂಭಿಸಿದೆ.

28. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ____?

ಅ) ಐದು ವರ್ಷಗಳವರೆಗೆ ಚಾಲ್ತಿಯಲ್ಲಿರುತ್ತದೆ

ಆ) ಕಾಯಿದೆ ಜಾರಿ ಇರುವವರೆಗೆ ಚಾಲ್ತಿಯಲ್ಲಿರುತ್ತದೆ.

ಇ) ಗ್ರಾಮ ಪಂಚಾಯತಿ ತೀರ್ಮಾನಿಸುವವರೆಗೆ

ಈ) ರಾಜ್ಯ ಸರ್ಕಾರ ತೀರ್ಮಾನಿಸುವವರೆಗೆ

ಗಮನಿಸಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಕಾಯಿದೆ ಮೂಲಕ ಜಾರಿಗೆ ತರಲಾಗಿದೆ. ಆದ್ದರಿಂದ ಕಾಯಿದೆ ಜಾರಿ ಇರುವವರೆಗೆ ಚಾಲ್ತಿಯಲ್ಲಿರುತ್ತದೆ.

29. ಕರ್ನಾಟಕ ಜಿಲ್ಲಾ ಪರಿಷತ್ ತಾಲ್ಲೂಕ್ ಪಂಚಾಯತ್ ಸಮಿತಿಗಳು, ಮಂಡಲ ಪಂಚಾಯ್ತಿ ಮತ್ತು ನ್ಯಾಯಪಂಚಾಯ್ತಿ ಕಾಯಿದೆ-1983 ಸಂಬಂಧಿಸಿದಂತೆ ಈ ಹೇಳಿಕೆಗಳನ್ನು ಗಮನಿಸಿ:

I) ಈ ಕಾಯಿದೆಯನ್ನು ಅಶೋಕ್ ಮೆಹ್ತಾ ಸಮಿತಿಯ ಶಿಫಾರಸನ್ನು ಆಧರಿಸಿ ಜಾರಿಗೆ ತರಲಾಯಿತು

II) 1985 ರಲ್ಲಿ ಜಾರಿಗೆ ಬಂದ ಕಾಯಿದೆಯ ಪ್ರಮುಖ ರೂವಾರಿ ರಾಮಕೃಷ್ಣ ಹೆಗ್ಗಡೆ ರವರು

III) ಈ ಕಾಯಿದೆ ಅನ್ವಯ 1987 ರಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಚುನಾವಣೆ ನಡೆಸಲಾಯಿತು

ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

ಅ) I & II

www.karunaduexams.com

ಆ) II & III

ಇ) I & III

ಈ) I, II & III

I, II & III

ಮೇಲಿನ ಎಲ್ಲಾ ಹೇಳಿಕೆಗಳು ಸರಿಯಾಗಿವೆ.

30. 1993 ರಲ್ಲಿ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ಜಾರಿಗೆ ಬಂದಾಗ ಕರ್ನಾಟಕದ ಮುಖ್ಯಮಂತ್ರಿ ಹಾಗೂ ಗ್ರಾಮೀಣಭೀವೃದ್ಧಿ ಸಚಿವರು ಆಗಿದ್ದವರನ್ನು ಗುರುತಿಸಿ?

ಅ) ಎಸ್ ಬಂಗಾರಪ್ಪ, ಅಬ್ದುಲ್ ನಜೀರ್ ಸಾಬ್

ಆ) ವೀರಪ್ಪ ಮೊಯ್ಲಿ, ಎಂ ವೈ ಘೋರ್ಪಡೆ

ಇ) ವಿರೇಂದ್ರ ಪಾಟೀಲ್, ಎಂ ವೈ ಘೋರ್ಪಡೆ

ಈ) ಎಸ್ ಆರ್ ಬೊಮ್ಮಾಯಿ, ಅಬ್ದುಲ್ ನಜೀರ್ ಸಾಬ್

ವೀರಪ್ಪ ಮೊಯ್ಲಿ, ಎಂ ವೈ ಘೋರ್ಪಡೆ

1993 ರಲ್ಲಿ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ಜಾರಿಗೆ ಬಂದಾಗ ಕರ್ನಾಟಕದ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಹಾಗೂ ಗ್ರಾಮೀಣಭೀವೃದ್ಧಿ ಸಚಿವರು ಎಂ ವೈ ಘೋರ್ಪಡೆ.

31. ಸರ್ಕಾರ ಗ್ರಾಮ ಪಂಚಾಯತಿಗಳಿಗೆ ನೀಡುವ ಅನುದಾನದ ಮೊತ್ತದಲ್ಲಿ ಶೇ ___ಕ್ಕೆ ಮೀರದಂತೆ ಸಿಬ್ಬಂದಿ ವೆಚ್ಚಗಳಿಗೆ ಖರ್ಚುಗಳನ್ನು ಭರಿಸಲು ಅವಕಾಶ ಕಲ್ಪಿಸಿದೆ?

ಅ) ಶೇ 40

ಆ) ಶೇ 60

ಇ) ಶೇ 50

ಈ) ಶೇ 75

ಶೇ 40

ಸರ್ಕಾರ ಗ್ರಾಮ ಪಂಚಾಯತಿಗಳಿಗೆ ನೀಡುವ ಅನುದಾನದ ಮೊತ್ತದಲ್ಲಿ ಶೇ 40 ಕ್ಕೆ ಮೀರದಂತೆ ಸಿಬ್ಬಂದಿ ವೆಚ್ಚಗಳಿಗೆ ಖರ್ಚುಗಳನ್ನು ಭರಿಸಲು ಅವಕಾಶ ಕಲ್ಪಿಸಿದೆ.

32. ರಾಜ್ಯ ಹಣಕಾಸು ಆಯೋಗಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

I) ರಾಜ್ಯ ಹಣಕಾಸು ಆಯೋಗವನ್ನು ರಾಜ್ಯಪಾಲರು ಪ್ರತಿ ಐದು ವರ್ಷಕ್ಕೊಮ್ಮೆ ನೇಮಕಮಾಡುವುದು

II) ರಾಜ್ಯ ಹಣಕಾಸು ಆಯೋಗವು ಒಬ್ಬರು ಅಧ್ಯಕ್ಷರು ಹಾಗೂ ಮೂವರು ಸದಸ್ಯರನ್ನು ಒಳಗೊಂಡಿರತಕ್ಕದ್ದು

www.karunaduexams.com

III) ಆಯೋಗ ಅಧ್ಯಕ್ಷರು ಮತ್ತು ಸದಸ್ಯರು ಸರ್ಕಾರದ ಹಣಕಾಸು ಕಾರ್ಯದರ್ಶಿಯವರನ್ನು ಸಂಭೋದಿಸಿ ತನ್ನ ಸಹಿ ಸಹಿತ ಬರಹದಲ್ಲಿ ರಾಜೀನಾಮೆ ನೀಡಬಹುದು

ಈ ಕೆಳಗೆ ನೀಡಿರುವ ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ?

ಅ) I & II

ಆ) II & III

ಇ) I & III

ಈ) ಮೇಲಿನ ಎಲ್ಲವೂ ಸರಿ

I & III

ಹೇಳಿಕೆ ಎರಡು ತಪ್ಪು ಏಕೆಂದರೆ ರಾಜ್ಯ ಹಣಕಾಸು ಆಯೋಗವು ಒಬ್ಬರು ಅಧ್ಯಕ್ಷರು ಹಾಗೂ ಇಬ್ಬರು ಸದಸ್ಯರನ್ನು ಒಳಗೊಂಡಿರತಕ್ಕದ್ದು.

33. ಪ್ರಸ್ತುತ ಸರ್ಕಾರ ಸಂಗ್ರಹಿಸುತ್ತಿರುವ ತೆರಿಗೆ, ಫೀಜು, ಶುಲ್ಕ ಇತ್ಯಾದಿ ನಿವ್ವಳ ಉತ್ಪತ್ತಿಯಲ್ಲಿ ಶೇ ___ ರಷ್ಟನ್ನು ಸ್ಥಳೀಯ ಸಂಸ್ಥೆಗಳಿಗೆ ನೀಡಲಾಗುತ್ತಿದೆ?

ಅ) ಶೇ 28

ಆ) ಶೇ 36

ಇ) ಶೇ 40

ಈ) ಶೇ 42

ಶೇ 36

ಗಮನಿಸಿ ಮೇಲಿನ ಪ್ರಶ್ನೆಯನ್ನು ಗ್ರಾಮ ಪಂಚಾಯತಿ ಪಾವತಿಸುವ ಸೆಸ್ ನೊಂದಿಗೆ ಗೊಂದಲ ಮಾಡಿಕೊಳ್ಳಬೇಡಿ. ಗ್ರಾಮ ಪಂಚಾಯತಿಯಲ್ಲಿ ವಸೂಲಾಗುವ ತೆರಿಗೆಯಲ್ಲಿ ಶೇ 34% ಸೆಸ್ ಆಗಿ ಪಾವತಿಸಬೇಕು (ಕ್ವಿಜ್ 12ರ ಮೊದಲ ಪ್ರಶ್ನೆಯನ್ನು ನೋಡಿ). ಮೇಲಿನ ಪ್ರಶ್ನೆಯಲ್ಲಿ ಸರ್ಕಾರ ಮಟ್ಟದಲ್ಲಿ ಸಂಗ್ರಹಿಸುವ ತೆರಿಗೆ, ಫೀಜು, ಶುಲ್ಕ ಇತ್ಯಾದಿಯಲ್ಲಿ ಶೇ 36% ರಷ್ಟನ್ನು ಸ್ಥಳೀಯ ಸಂಸ್ಥೆಗಳಿಗೆ ನೀಡಬೇಕು.

34. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ-1993ರ ಯಾವ ಪ್ರಕರಣದಡಿ ವಾರ್ಷಿಕ ಆಡಳಿತ ವರದಿಯನ್ನು ಜಿಲ್ಲಾ ಪಂಚಾಯತಿಗೆ ಕಳುಹಿಸತಕ್ಕದ್ದು?

ಅ) ಪ್ರಕರಣ 286

ಆ) ಪ್ರಕರಣ 299

ಇ) ಪ್ರಕರಣ 300

ಈ) ಪ್ರಕರಣ 312

www.karunaduexams.com

ಪ್ರಕರಣ 300

ಪ್ರಕರಣ 300ರಡಿ ವಾರ್ಷಿಕ ಆಡಳಿತ ವರದಿಯನ್ನು ಏಪ್ರಿಲ್ ಮೊದಲನೇ ದಿನದ ತರುವಾಯ ಅದಷ್ಟು ಬೇಗನೆ ಜಿಲ್ಲಾ ಪಂಚಾಯತಿಗೆ ಸಲ್ಲಿಸಬೇಕು.

35. ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಅಧ್ಯಕ್ಷರು _______?

ಅ) ಮುಖ್ಯಮಂತ್ರಿ

ಆ) ಗ್ರಾಮೀಣಾಭೀವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಇ) ಗ್ರಾಮೀಣಾಭೀವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿ

ಈ) ರಾಜ್ಯದ ಅಭಿವೃದ್ಧಿ ಆಯುಕ್ತರು

ಮುಖ್ಯಮಂತ್ರಿ

2015ರಲ್ಲಿ ಪ್ರಕರಣ 310ಎ ಗೆ ತಿದ್ದುಪಡಿ ತಂದು 310 ಬಿ ಸೇರ್ಪಡೆಗೊಳಿಸಿ ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ದಿ ಸಮಿತಿಯನ್ನು ಸ್ಥಾಪಿಸಬೇಕಿದೆ. ಈ ಸಮಿತಿಗೆ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿರುತ್ತಾರೆ.

36. ಈ ಪ್ರಕರಣದಡಿ ಸ್ವಚ್ಛ ಪರಿಸರ ಕಾಪಾಡುವುದು ಗ್ರಾಮ ಪಂಚಾಯತಿಯ ಕರ್ತವ್ಯವಾಗಿದೆ _____?

ಅ) 58 ಎ

ಆ) 58 ಡಿ

ಇ) 58 ಇ

ಈ) 58 ಎಫ್

58 ಇ

ಪ್ರಕರಣ 58ಇ ರಡಿ ಸ್ವಚ್ಛ ಪರಿಸರ ಕಾಪಾಡುವುದು ಗ್ರಾಮ ಪಂಚಾಯತಿಯ ಕರ್ತವ್ಯವಾಗಿದೆ.

37. ಗ್ರಾಮ ಪಂಚಾಯತಿಯ ಸಭಾ ನಡವಳಿಯ ಒಂದು ಪ್ರತಿಯನ್ನು ಎಷ್ಟು ದಿನಗಳೊಳಗೆ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸಬೇಕು?

ಅ) 10

ಆ) 15

ಇ) 20

ಈ) 30

10

www.karunaduexams.com

ಗ್ರಾಮ ಪಂಚಾಯತಿಯ ಸಭಾ ನಡವಳಿಯ ಒಂದು ಪ್ರತಿಯನ್ನು ಸಭೆ ನಡೆದ 10 ದಿನದೊಳಗೆ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸಬೇಕು.

38. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ 60:40 ಅನುಪಾತವೆಂದರೆ ____?

ಅ) ಸಾಮಗ್ರಿ ವೆಚ್ಚ 60ಕ್ಕಿಂತ ಹೆಚ್ಚು, ಕೂಲಿ ವೆಚ್ಚ 40ಕ್ಕಿಂತ ಕಡಿಮೆ.

ಆ) ಸಾಮಗ್ರಿ ವೆಚ್ಚ 60, ಕೂಲಿ ವೆಚ್ಚ 40

ಇ) ಕೂಲಿ ವೆಚ್ಚ 60ಕ್ಕಿಂತ ಹೆಚ್ಚು, ಸಾಮಗ್ರಿ ವೆಚ್ಚ 40ಕ್ಕಿಂತ ಕಡಿಮೆ

ಈ) ಕೂಲಿ ವೆಚ್ಚ ನಿಖರವಾಗಿ 60, ಸಾಮಗ್ರಿ ವೆಚ್ಚ ನಿಖರವಾಗಿ 40

ಕೂಲಿ ವೆಚ್ಚ 60ಕ್ಕಿಂತ ಹೆಚ್ಚು, ಸಾಮಗ್ರಿ ವೆಚ್ಚ 40ಕ್ಕಿಂತ ಕಡಿಮೆ

39. ಸರಸ್ವತಿ ಎಂಬ ಫಲಾನುಭವಿಗೆ ಬಸವ ವಸತಿ ಯೋಜನೆಯಡಿ ಮನೆ ಮಂಜೂರಾಗಿದ್ದು, ಪಾಯ ಹಂತದಲ್ಲಿ ಜಿಪಿಎಸ್ ಫೋಟೋವನ್ನು ಗ್ರಾಮ ಪಂಚಾಯತಿ ವತಿಯಿಂದ ತೆಗೆಯಲಾಗಿದೆ. ಸರಸ್ವತಿಯವರಿಗೆ ಈ ಕೆಳಗಿನ ಯಾರು ಹಣವನ್ನು ಬಿಡುಗಡೆಮಾಡುತ್ತಾರೆ?

ಅ) ಪಂಚಾಯತ್ ಅಭಿವೃದ್ಧಿ ಅಧಿಕಾರಿ

ಆ) ಮುಖ್ಯ ಕಾರ್ಯನಿರ್ವಾಹಣಾಧಿಕಾರಿ

ಇ) ಗ್ರಾಮೀಣಭಿವೃದ್ಧಿ ಇಲಾಖೆ

ಈ) ರಾಜೀವ್ ಗಾಂಧಿ ವಸತಿ ನಿಗಮ

ರಾಜೀವ್ ಗಾಂಧಿ ವಸತಿ ನಿಗಮ

ಪಂಚಾಯತಿಗಳಲ್ಲಿ ವಿವಿಧ ವಸತಿ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳಿಗೆ ರಾಜೀವ್ ಗಾಂಧಿ ವಸತಿ ನಿಗಮ ನೇರವಾಗಿ ಹಣವನ್ನು ಬಿಡುಗಡೆಮಾಡುತ್ತದೆ. ಈ ಫಲಾನುಭವಿಗಳಿಗೆ ಬ್ಯಾಂಕ್ ಖಾತೆಯನ್ನು ಸಹ ನಿಗಮದಿಂದಲೇ ತೆರೆಯಲಾಗುತ್ತದೆ.

40. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993, ರಾಜ್ಯಪಾಲರಿಂದ ಅನುಮೋದನೆಗೊಂಡ ದಿನಾಂಕ____?

ಅ) ಏಪ್ರಿಲ್ 30, 1993

ಆ) ಏಪ್ರಿಲ್ 24, 1993

ಇ) ಏಪ್ರಿಲ್ 25, 1993

ಈ) ಮಾರ್ಚ್30, 1993

ಏಪ್ರಿಲ್ 30, 1993

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993, ಏಪ್ರಿಲ್ 30, 1993 ರಾಜ್ಯಪಾಲರಿಂದ ಅನುಮೋದನೆಗೊಂಡಿದೆ.

www.karunaduexams.com

41. ಗ್ರಾಮ ಪಂಚಾಯತಿಗಳಿಗೆ ಹೆಚ್ಚು ಅಧಿಕಾರವನ್ನು ನೀಡುವ ಸಲುವಾಗಿ "ಬೇಲೂರು ಘೋಷಣೆಗೆ" ಯಾವಾಗ ಸಹಿ ಮಾಡಲಾಯಿತು?

ಅ) ಜನವರಿ 23, 2004

ಆ) ಜುಲೈ 14, 2004

ಇ) ಏಪ್ರಿಲ್ 24, 2006

ಈ) ಆಗಸ್ಟ್ 10, 2008

ಜನವರಿ 23, 2004

ಧಾರಾವಾಡದ ಬೇಲೂರಿನಲ್ಲಿ ಈ ಸಮಾವೇಶ ನಡೆದ ಕಾರಣ ಬೇಲೂರು ಘೋಷಣೆ ಎನ್ನಲಾಗಿದೆ.

42. ಉದ್ಯೋಗ ಚೀಟಿಯಲ್ಲಿ ನೋಂದಾಯಿಸಿಕೊಳ್ಳುವ ಕುಟುಂಬಗಳ ____ ಹೆಸರುಗಳನ್ನು ನೋಂದಾಯಿಸಬೇಕು?

ಅ) ಕುಟುಂಬದಲ್ಲಿರುವ ಎಲ್ಲಾ ಸದಸ್ಯರ

ಆ) ಎಲ್ಲಾ ನೋಂದಾಯಿತ ವಯಸ್ಕರ

ಇ) ಮನೆಯ ಯಜಮಾನ ಮಾತ್ರ

ಈ) ಯಜಮಾನ ಮತ್ತು ವಯಸ್ಕರ

ಎಲ್ಲಾ ನೋಂದಾಯಿತ ವಯಸ್ಕರ

ಉದ್ಯೋಗ ಚೀಟಿಯಲ್ಲಿ ನೋಂದಾಯಿಸಿಕೊಳ್ಳುವ ಕುಟುಂಬದ ಎಲ್ಲಾ ನೋಂದಾಯಿತ ವಯಸ್ಕರ ಹೆಸರನ್ನು ನಮೂದಿಸಬೇಕು.

43. ಸ್ವಚ್ಚ ಭಾರತ ಅಭಿಯಾನ ಜಾರಿಗೆ ಬಂದ ದಿನಾಂಕ _____?

ಅ) ಆಗಸ್ಟ್ 15, 2011

ಆ) ಅಕ್ಟೋಬರ್ 2, 2014

ಇ) ಜನವರಿ 1, 2014

ಈ) ಆಗಸ್ಟ್ 15, 2013

ಅಕ್ಟೋಬರ್ 2, 2014

44. ಗ್ರಾಮ ಪಂಚಾಯತಿ ಮಹಿಳೆಯರ ಮತ್ತು ಮಕ್ಕಳ ಸಾಗಣೆ ಹಾಗೂ ಬಾಲವೇಶ್ಯಾ ಪದ್ಧತಿಯನ್ನು ತಡೆಗಟ್ಟಲು ಹಾಗೂ ಸಾಗಣೆಗೊಳಗಾದ ಮಹಿಳೆಯರ ರಕ್ಷಣೆ ಮತ್ತು ಪುನರ್ವಸತಿ ಕಲ್ಪಿಸುವ ಸಮಿತಿಗೆ ಅಧ್ಯಕ್ಷರು ಯಾರಾಗಿರುತ್ತಾರೆ?

www.karunaduexams.com

ಅ) ಉಪಾಧ್ಯಕ್ಷರು

ಆ) ಅಧ್ಯಕ್ಷರು

ಇ) ಮಹಿಳೆ ಸದಸ್ಯರಲ್ಲಿ ಒಬ್ಬರು

ಈ) ಕಾರ್ಯದರ್ಶಿ

ಅಧ್ಯಕ್ಷರು

ಗ್ರಾಮ ಪಂಚಾಯತಿ ಅಧ್ಯಕ್ಷರು ಮೇಲಿನ ಸಮಿತಿಗೆ ಅಧ್ಯಕ್ಷರಾಗಿರುತ್ತಾರೆ.

45. ಯಾವ ಜಿಲ್ಲೆಯಲ್ಲಿ ಪಂಚಾಯತ್-100 ಬಾಪೂಜಿ ಸೇವಾ ಕೇಂದ್ರಕ್ಕೆ ಚಾಲನೆ ನೀಡಲಾಯಿತು?

ಅ) ಚಿಕ್ಕಮಗಳೂರು

ಆ) ಹಾವೇರಿ

ಇ) ಚಿತ್ರದುರ್ಗ

ಈ) ಬೆಂಗಳೂರು ಗ್ರಾಮಾಂತರ

ಹಾವೇರಿ

ಹಾವೇರಿ ಜಿಲ್ಲೆಯ ಕಾಕೊಳ್ ಗ್ರಾಮ ಪಂಚಾಯತಿಯಲ್ಲಿ ರಾಜ್ಯದ ಮೊದಲ ಪಂಚಾಯತ್-100 ಬಾಪೂಜಿ ಸೇವಾ ಕೇಂದ್ರಕ್ಕೆ ಚಾಲನೆ ನೀಡಲಾಯಿತು.

46. ಬರಪೀಡಿತ ಅಥವಾ ನೈಸರ್ಗಿಕ ವಿಕೋಪಗಳಾದ ಸಂದರ್ಭದಲ್ಲಿ MGNREGA ಯೋಜನೆಯಡಿ 100 ದಿನಗಳಿಂತ ಹೆಚ್ಚುವರಿಯಾಗಿ 50 ದಿನಗಳ ಮಾನವ ದಿನಗಳ ಕೆಲಸವನ್ನು ಯಾರು ಹೆಚ್ಚಿಸಬಹುದು?

ಅ) ರಾಜ್ಯ ಸರ್ಕಾರ

ಆ) ಸಂಬಂಧಪಟ್ಟ ಜಿಲ್ಲಾ ಪಂಚಾಯತಿ

ಇ) ಕೇಂದ್ರ ಸರ್ಕಾರ

ಈ) ಗ್ರಾಮ ಪಂಚಾಯತಿ

ಕೇಂದ್ರ ಸರ್ಕಾರ

47. ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ಮತ್ತು (ತಿದ್ದುಪಡಿ) ಅಧಿನಿಯಮ 2014, ರಡಿ ಗ್ರಾಮ ಪಂಚಾಯತಿಯಲ್ಲಿ ಎಷ್ಟು ಸೇವೆಗಳನ್ನು ನೀಡಲಾಗುತ್ತಿದೆ?

ಅ) ಒಂಬತ್ತು

ಆ) ಹತ್ತು

ಇ) ಹನ್ನೊಂದು

www.karunaduexams.com

ಈ) ಹದಿನೈದು

ಹನ್ನೊಂದು

48. MGNREGA ಕಾಯಿದೆಯ ಯಾವ ಪ್ರಕರಣದಡಿ ಉದ್ಯೋಗ ಕೇಳಿದ 15 ದಿನದೊಳಗೆ ಕೆಲಸ ನೀಡದಿದ್ದಲ್ಲಿ, ನಿರುದ್ಯೋಗ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ?

ಅ) ಪ್ರಕರಣ 7 (1)

ಆ) ಪ್ರಕರಣ 15 (7)

ಇ) ಪ್ರಕರಣ 16 (1)

ಈ) ಪ್ರಕರಣ 12

ಪ್ರಕರಣ 7 (1)

49. ಗ್ರಾಮ ಪಂಚಾಯತಿಯಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿ ______?

ಅ) ಪಂಚಾಯತ್ ಅಭಿವೃದ್ಧಿ ಅಧಿಕಾರಿ

ಆ) ಕಾರ್ಯದರ್ಶಿ

ಇ) ಲೆಕ್ಕ ಸಹಾಯಕ

ಈ) ಬಿಲ್ ಕಲೆಕ್ಟರ್

ಕಾರ್ಯದರ್ಶಿ

ಗ್ರಾಮ ಪಂಚಾಯತಿಯ ಕಾರ್ಯದರ್ಶಿ ರವರು ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿರುತ್ತಾರೆ. ಪಿ ಡಿ ಓ ರವರು ಪ್ರಥಮ ಮೇಲ್ಮನವಿ ಪ್ರಾಧಿಕಾರ ಆಗಿರುತ್ತಾರೆ.

50. MGNREGA ಯೋಜನೆ ಕ್ರಿಯಾಯೋಜನೆಯ ಒಟ್ಟು ಮೊತ್ತದ ___ ರಷ್ಟನ್ನು ಸಾಮಾಜಿಕ ಅರಣ್ಯೀಕರಣಕ್ಕೆ ವಿನಿಯೋಗಿಸುವುದು ಕಡ್ಡಾಯವಾಗಿದೆ?

ಅ) ಶೇ 20

ಆ) ಶೇ 40

ಇ) ಶೇ 10

ಈ) ಶೇ 75

ಶೇ 20

ಶೇ 20 ರಷ್ಟನ್ನು ಸಾಮಾಜಿಕ ಅರಣ್ಯೀಕರಣಕ್ಕೆ ವಿನಿಯೋಗಿಸುವುದು ಕಡ್ಡಾಯ. ಅಂದರೆ ಉದಾಹರಣೆ ನೀವು 1000 ರೂ ಗೆ ಕ್ರಿಯಾ ಯೋಜನೆ ತಯಾರಿಸಿದರೆ ಅದರಲ್ಲಿ 200 ರೂ ಅನ್ನು ಅರಣ್ಯೀಕರಣಕ್ಕೆ ಮೀಸಲಿಡಬೇಕು.

www.karunaduexams.com

51. ಪಂಚಾಯತ್ ರಾಜ್ ಅಧಿನಿಯಮದ ಯಾವ ಪ್ರಕರಣ ನೀರಿನ ಸರಬರಾಜಿಗೆ ಸಂಬಂಧಿಸಿದ ಉಪನಿಯಮಗಳನ್ನು ರೂಪಿಸುವ ಅಧಿಕಾರವನ್ನು ಗ್ರಾಮ ಪಂಚಾಯತಿಗೆ ನೀಡಿದೆ?

ಅ) 68ನೇ ಪ್ರಕರಣ

ಆ) 70ನೇ ಪ್ರಕರಣ

ಇ) 78ನೇ ಪ್ರಕರಣ

ಈ) 80ನೇ ಪ್ರಕರಣ

78ನೇ ಪ್ರಕರಣ

78ನೇ ಪ್ರಕರನದಡಿ ನೀರಿನ ಸರಬರಾಜಿಗೆ ಸಂಬಂಧಿಸಿದ ಉಪನಿಯಮಗಳನ್ನು ರೂಪಿಸುವ ಅಧಿಕಾರವನ್ನು ಗ್ರಾಮ ಪಂಚಾಯತಿಗೆ ನೀಡಲಾಗಿದೆ.

52. ಗ್ರಾಮ ಪಂಚಾಯತಿಯಲ್ಲಿ ಗ್ರಾಮ ಪಂಚಾಯತಿಯ ಚುನಾವಣೆಗಳು _____?

ಅ) ಪಕ್ಷದ ಆಧಾರದ ಮೇಲೆ ನಡೆಯುತ್ತವೆ

ಆ) ಪಕ್ಷದ ಚಿಹ್ನೆಗಳ ಅನ್ವಯ ನಡೆಯುತ್ತವೆ

ಇ) ಪಕ್ಷರಹಿತ ಆಧಾರದ ಮೇಲೆ ನಡೆಯುತ್ತವೆ

ಈ) ನಾಮನಿರ್ದೇಶನದ ಪ್ರಕಾರ ನಡೆಸಲಾಗುತ್ತದೆ

ಪಕ್ಷರಹಿತ ಆಧಾರದ ಮೇಲೆ ನಡೆಯುತ್ತವೆ

53. ಗ್ರಾಮ ಪಂಚಾಯತಿಯ ಆದಾಯ ಮತ್ತು ವೆಚ್ಚದ ಬಜೆಟ್ ಅನ್ನು ಈ ಕೆಳಕಂಡ ಯಾವ ಅವಧಿಯಲ್ಲಿ ನಡೆಯುವ ಸಭೆಯಲ್ಲಿ ಮಂಡಿಸಬೇಕು?

ಅ) ಜನವರಿ ಮೊದಲನೇ ದಿನ ಮತ್ತು ಫೆಬ್ರವರಿ ಹತ್ತನೇ ದಿನ

ಆ) ಫೆಬ್ರವರಿ ಮೊದಲನೇ ದಿನ ಮತ್ತು ಮಾರ್ಚ್ ಹತ್ತನೇ ದಿನ

ಇ) ಮಾರ್ಚ್ ಮೊದಲನೇ ದಿನ ಮತ್ತು ಏಪ್ರಿಲ್ ಹತ್ತನೇ ದಿನ

ಈ) ಮೇಲಿನ ಯಾವುದು ಅಲ್ಲ

ಫೆಬ್ರವರಿ ಮೊದಲನೇ ದಿನ ಮತ್ತು ಮಾರ್ಚ್ ಹತ್ತನೇ ದಿನ

54. ಚಂದ್ರಪ್ಪನು ಗ್ರಾಮ ಪಂಚಾಯತಿಯಿಂದ ಅಳವಡಿಸಿರುವ ಸಾರ್ವಜನಿಕ ಕುಡಿಯುವ ನೀರಿನ ಪೈಪನ್ನು ದುರಸ್ಥಿ ಮಾಡಿಸುವಂತೆ ಸಕಾಲ ಯೋಜನೆಯಡಿ ಗ್ರಾಮ ಪಂಚಾಯತಿಗೆ ಅರ್ಜಿ ನೀಡಿದ್ದಾನೆ. ಗ್ರಾಮ ಪಂಚಾಯತಿಯು ಎಷ್ಟು ದಿನದೊಳಗೆ ದುರಸ್ಥಿಪಡಿಸಬೇಕು?

ಅ) ಮೂರು

ಆ) ಐದು

ಇ) ಎಂಟು

ಈ) ಹತ್ತು

ಮೂರು

ಸಕಾಲ ಯೋಜನೆಯಡಿ ಕುಡಿಯುವ ನೀರು ಮತ್ತು ಬೀದಿ ದೀಪಗಳ ದುರಸ್ಥಿಯನ್ನು ಅರ್ಜಿ ನೀಡಿದ (ದೂರವಾಣಿ ಮೂಲಕ ಹೇಳಿದರು ಸಹ) ಮೂರು ದಿನದೊಳಗೆ ಸರಿಪಡಿಸಬೇಕು.

55. ರಾಜ್ಯ ಸರ್ಕಾರದ ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

I) ಈ ಯೋಜನೆಯನ್ನು ಪರಿಶಿಷ್ಠ ಜಾತಿ/ಪಂಗಡ ಮತ್ತು ಇತರೆ ವರ್ಗದ ವಿಧವೆಯರಿಗಾಗಿ ಜಾರಿಗೆ ತಂದಿದೆ

II) ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ನಿರ್ಮಿಸುವ ಮನೆಗಳಿಗೆ ರೂ 1,24,000 ಹಾಗೂ ನಗರಗಳಲ್ಲಿ ನಿರ್ಮಿಸಲಾಗುವ ಮನೆಗಳಿಗೆ ರೂ 1,50,000 ಸಹಾಯಧನ ನೀಡಲಾಗುವುದು.

ಸರಿಯಾದ ಉತ್ತರವನ್ನು ಈ ಕೆಳಗೆ ನೀಡಿರುವ ಕೋಡ್ ಮೂಲಕ ಆರಿಸಿ:

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಎರಡು ಹೇಳಿಕೆಗಳು ಸರಿ

ಈ) ಎರಡು ಹೇಳಿಕೆಗಳು ತಪ್ಪು

ಎರಡು ಹೇಳಿಕೆ ತಪ್ಪು

ಈ ಯೋಜನೆಯನ್ನು ಪರಿಶಿಷ್ಠ ಜಾತಿ/ಪಂಗಡ ಮಾತ್ರ ಮೀಸಲು. ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ನಿರ್ಮಿಸುವ ಮನೆಗಳಿಗೆ ರೂ 1,50,000 ಹಾಗೂ ನಗರಗಳಲ್ಲಿ ನಿರ್ಮಿಸಲಾಗುವ ಮನೆಗಳಿಗೆ ರೂ 1,80,000 ಸಹಾಯಧನ ನೀಡಲಾಗುವುದು.

56. ಗ್ರಾಮ ಪಂಚಾಯತಿಗಳ ಹಾಗೂ ಸ್ಥಾಯಿ ಸಮಿತಿಗಳ ರಚನೆ ಬಗ್ಗೆ ಅಧಿನಿಯಮ, 1993ರ ಯಾವ ಅಧ್ಯಾಯದಲ್ಲಿ ಸ್ಪಷ್ಟಪಡಿಸಲಾಗಿದೆ?

ಅ) ಅಧ್ಯಾಯ II

ಆ) ಅಧ್ಯಾಯ III

ಇ) ಅಧ್ಯಾಯ IV

ಈ) ಅಧ್ಯಾಯ V

ಅಧ್ಯಾಯ IV

www.karunaduexams.com

ನಮ್ಮ ಉತ್ತರ ಅಧ್ಯಾಯ III ಆಗಿತ್ತು. ಸರಿಯಾದ ಉತ್ತರ ಅಧ್ಯಾಯ IVರ ಪ್ರಕರಣ 61 ಆಗಿದೆ.

57. MGNREGAಯಡಿ ಮೊದಲ ಬಾರಿಗೆ ಉದ್ಯೋಗ ಚೀಟಿಯನ್ನು ಗ್ರಾಮ ಪಂಚಾಯಿತಿಯು ಕೂಲಿ ಕಾರ್ಮಿಕ ಕುಟುಂಬದಿಂದ___?

ಅ) ಹಣ ಪಡೆದು ನೀಡಬೇಕು

ಆ) ಹಣ ಪಡಯದೆ ನೀಡಬೇಕು

ಇ) ಶೇ 20% ಹಣ ನೀಡಿ ಪಡೆಯಬೇಕು

ಈ) ಕೂಲಿ ಮೊತ್ತದಲ್ಲಿ ಹಣವನ್ನು ಕಡಿತ ಮಾಡಬೇಕು

ಹಣ ಪಡಯದೆ ನೀಡಬೇಕು

58. ಗ್ರಾಮ ಪಂಚಾಯತಿಯು ಕನಿಷ್ಠ ಪಕ್ಷ ಎಷ್ಟು ತಿಂಗಳಿಗೊಮ್ಮೆ ಗ್ರಾಮ ಪಂಚಾಯತಿ ಸಾಮಾನ್ಯ ಸಭೆಯನ್ನು ಕರೆಯಬೇಕು?

ಅ) ಎರಡು ತಿಂಗಳಿಗೊಮ್ಮೆ

ಆ) ಮೂರು ತಿಂಗಳಿಗೊಮ್ಮೆ

ಇ) ಒಂದು ತಿಂಗಳಿಗೊಮ್ಮೆ

ಈ) ಹದಿನೈದು ದಿನಕ್ಕೊಮ್ಮೆ

ಒಂದು ತಿಂಗಳಿಗೊಮ್ಮೆ

59. ಯಾವ ಪ್ರಕರಣದಡಿ ಗ್ರಾಮ ಪಂಚಾಯತಿಯ ಸದಸ್ಯರು ತಮ್ಮ ಆಸ್ತಿಗಳ ಮತ್ತು ಹೊಣೆಗಾರಿಕೆಯನ್ನು ಘೋಷಣೆ ಮಾಡುವುದು ಕಡ್ಡಾಯವಾಗಿದೆ?

ಅ) ಪ್ರಕರಣ 43

ಆ) ಪ್ರಕರಣ 43 ಎ

ಇ) ಪ್ರಕರಣ 43 ಬಿ

ಈ) ಪ್ರಕರಣ 44

ಪ್ರಕರಣ 43 ಬಿ

ಪ್ರಕರಣ 43 ಬಿ ಯನ್ನು 2015 ರ ತಿದ್ದುಪಡಿಯಲ್ಲಿ ಸೇರ್ಪಡೆಗೊಳಿಸಲಾಗಿದೆ. ಈ ಪ್ರಕರಣದಡಿ ಪ್ರತಿಯೊಬ್ಬ ಸದಸ್ಯನು ತಾನು ಮತ್ತು ತನ್ನ ಅವಿಭಕ್ತ ಕುಟುಂಬದ ಎಲ್ಲ ಸದಸ್ಯರು ಎರಡು ಲಕ್ಷಕ್ಕಿಂತ [ಪ್ರಶ್ನೆ: ಎಷ್ಟು ಲಕ್ಷಕ್ಕಿಂತ?] ಹೆಚ್ಚಿನ ಚರ ಮತ್ತು ಸ್ಥಿರ ಆಸ್ತಿಯನ್ನು ಮತ್ತು ಹೊಣೆಗಾರಿಕೆಯನ್ನು ಹೊಂದಿರುವ ಬಗ್ಗೆ ರಾಜ್ಯ ಚುನಾವಣಾ ಆಯೋಗದ ಮುಂದೆ ನಿಯಮಿಸಬಹುದಾದಂಥ ನಮೂನೆಯಲ್ಲಿ ತನ್ನ ಪದಾವಧಿ ಪ್ರಾರಂಭವಾದ ದಿನಾಂಕದಿಂದ ಮೂರು ತಿಂಗಳೊಳಗೆ

www.karunaduexams.com

ಮತ್ತು ಅವನ ಅಧಿಕಾರವದಿ ಮುಗಿಯುವ ತನಕ ಮತ್ತು ಪ್ರತಿ ಆರ್ಥಿಕ ವರ್ಷ ಮುಕ್ತಾಯವಾದ ಒಂದು ತಿಂಗಳೊಳಗೆ ಸಂಬಂಧಪಟ್ಟ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮೂಲಕ ದಾಖಲು ಮಾಡತಕ್ಕದ್ದು. ಪಿಡಿಓ ಘೋಷಿಸಲಾದ ದಾಖಲೆಗಳನ್ನು ಆ ವರ್ಷದ ಮೇ ಮೊದಲ ವಾರದಲ್ಲಿ ರಾಜ್ಯ ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕು. ತಡವಾದಲ್ಲಿ ಜುಲೈ ಮೊದಲನೆ ವಾರದಲ್ಲಿ ಸಲ್ಲಿಸಬೇಕು. ಸದಸ್ಯನು ನಿಗದಿತ ಅವಧಿಯೊಳಗೆ ಘೋಷಣೆ ಮಾಡದಿದ್ದಲ್ಲಿ ಅಥವಾ ಸುಳ್ಳು ಮಾಹಿತಿ ನೀಡಿದ್ದಲ್ಲಿ ಚುನಾವಣಾ ಆಯೋಗ ಸದಸ್ಯತ್ವನ್ನು ರದ್ದುಪಡಿಸಬಹುದಾಗಿದೆ.

**60.** ಗ್ರಾಮ ಪಂಚಾಯತಿಯ ಅಧ್ಯಕ್ಷನು ಗ್ರಾಮ ಸಭೆಯನ್ನು ಕರೆಯಬೇಕಾದ ಅಥವಾ ಅವಶ್ಯಕವಿದ್ದಾಗ ಕರೆಯಲು ವಿಫಲವಾದರೆ ____ ರೂ ಗಳನ್ನು ಗ್ರಾಮ ಪಂಚಾಯತಿಯ ನಿಧಿಗೆ ಸಂದಾಯ ಮಾಡಬೇಕು?

ಅ) ರೂ 500

ಆ) ರೂ 750

ಇ) ರೂ 1000

ಈ) ರೂ 1500

ರೂ 1000

ಪಂಚಾಯತ್ ರಾಜ್ ಅಧಿನಿಯಮ 1993ಕ್ಕೆ 2015ಕ್ಕೆ ತಿದ್ದುಪಡಿ ಮೂಲಕ ಜನವಸತಿ ಸಭಾ, ವಾರ್ಡ್ ಸಭಾ ಮತ್ತು ಗ್ರಾಮ ಸಭಾವನ್ನು ಕರೆಯುವ ಹೊಣೆಗಾರಿಕೆಯನ್ನು ಚುನಾಯಿತ ಸದಸ್ಯರಿಗೆ ನೀಡಲಾಗಿದೆ. ಜನವಸತಿ ಸಭೆಯನ್ನ ಜನವಸತಿ ಪ್ರದೇಶದ ಸದಸ್ಯನು ಕರೆಯಬೇಕು, ವಾರ್ಡ್ ಸಭೆಯನ್ನ ಆ ವಾರ್ಡ್ ನ ಸದಸ್ಯನು ಕರೆಯಬೇಕು ಅದೇ ರೀತಿ ಗ್ರಾಮ ಸಭೆಯನ್ನ ಗ್ರಾಮ ಪಂಚಾಯತಿ ಅಧ್ಯಕ್ಷನು ಕರೆಯಬೇಕು. ಅವಶ್ಯವಿದ್ದಾಗ ಜನವಸತಿ ಸಭೆಯನ್ನು ಕರೆಯಲು ಮತ್ತು ಅಧ್ಯಕ್ಷತೆ ವಹಿಸಲು ವಿಫಲನಾಗುವ ಸದಸ್ಯನು ಯಾವುದೇ ದಂಡವನ್ನು ತೆರಬೇಕಾಗಿಲ್ಲ. ಆದರೆ ವಾರ್ಡ್ ಸಭೆ ಕರೆಯಲು ಮತ್ತು ಅಧ್ಯಕ್ಷತೆ ವಹಿಸಲು ಸದಸ್ಯನು ವಿಫಲವಾದರೆ ರೂ 100 ಅನ್ನು ಗ್ರಾಮ ಪಂಚಾಯತಿಯ ನಿಧಿಗೆ ಸಂದಾಯ ಮಾಡಬೇಕು ಮತ್ತು ವಿಫಲತೆಗೆ ವಿವರಣೆಯನ್ನು ನೀಡಬೇಕು. ಗ್ರಾಮ ಪಂಚಾಯತಿಯ ಅಧ್ಯಕ್ಷನು ಗ್ರಾಮ ಸಭೆಯನ್ನು ಕರೆಯಬೇಕಾದ ಅಥವಾ ಅವಶ್ಯಕವಿದ್ದಾಗ ಕರೆಯಲು ವಿಫಲವಾದರೆ ರೂ 1000 ವನ್ನು ಗ್ರಾಮ ಪಂಚಾಯತಿಯ ನಿಧಿಗೆ ಸಂದಾಯ ಮಾಡಬೇಕು ಮತ್ತು ಮುಂದಿನ ಗ್ರಾಮ ಸಭೆಯಲ್ಲಿ ವಿಫಲತೆಗೆ ಬಗ್ಗೆ ಕಾರಣ ನೀಡಬೇಕು [ನೆನಪಿಡಿ: ಈ ಮೊತ್ತವನ್ನು ಗ್ರಾಮ ಪಂಚಾಯತಿ ನಿಧಿಗೆ ಸಂದಾಯ ಮಾಡಬೇಕು].

61. ಗ್ರಾಮ ಸಭಾದ ಸಾಮಾನ್ಯ ಸಭೆಗೆ ಅಗತ್ಯವಿರುವ ಕೋರಂ ______

ಅ) ಗ್ರಾಮಸಭಾದಲ್ಲಿರುವ ಮತದಾರರ ಒಟ್ಟು ಸಂಖ್ಯೆ ಹತ್ತನೇ ಒಂದು ಭಾಗದಷ್ಟು ಮತದಾರರು ಅಥವಾ ನೂರು ಸದಸ್ಯರು

ಆ) ಗ್ರಾಮಸಭಾದಲ್ಲಿರುವ ಮತದಾರರ ಒಟ್ಟು ಸಂಖ್ಯೆ ಹದಿನೈದನೇ ಒಂದು ಭಾಗದಷ್ಟು ಮತದಾರರು ಅಥವಾ ನೂರೈವತ್ತು ಸದಸ್ಯರು

www.karunaduexams.com

ಇ) ಗ್ರಾಮಸಭಾದಲ್ಲಿರುವ ಮತದಾರರ ಒಟ್ಟು ಸಂಖ್ಯೆ ಇಪ್ಪತ್ತನೇ ಒಂದು ಭಾಗದಷ್ಟು ಮತದಾರರು ಅಥವಾ ಎರಡು ನೂರು ಸದಸ್ಯರು

ಈ) ಗ್ರಾಮಸಭಾದಲ್ಲಿರುವ ಮತದಾರರ ಒಟ್ಟು ಸಂಖ್ಯೆ ಇಪ್ಪತ್ತೈದನೇ ಒಂದು ಭಾಗದಷ್ಟು ಮತದಾರರು ಅಥವಾ ಎರಡು ನೂರೈವತ್ತು ಸದಸ್ಯರು

ಗ್ರಾಮಸಭಾದಲ್ಲಿರುವ ಮತದಾರರ ಒಟ್ಟು ಸಂಖ್ಯೆ ಹತ್ತನೇ ಒಂದು ಭಾಗದಷ್ಟು ಮತದಾರರು ಅಥವಾ ನೂರು ಸದಸ್ಯರು

62. ಗ್ರಾಮ ಪಂಚಾಯತಿಗಳಲ್ಲಿ ಎಷ್ಟು ವರ್ಷಗಳಿಗೊಮ್ಮೆ ತೆರಿಗೆಯನ್ನು ಪರಿಷ್ಕರಿಸಬೇಕು?

ಅ) ಎರಡು ವರ್ಷಗಳಿಗೊಮ್ಮೆ

ಆ) ಮೂರು ವರ್ಷಗಳಿಗೊಮ್ಮೆ

ಇ) ಐದು ವರ್ಷಗಳಿಗೊಮ್ಮೆ

ಈ) ನಾಲ್ಕು ವರ್ಷಗಳಿಗೊಮ್ಮೆ

ಎರಡು ವರ್ಷಗಳಿಗೊಮ್ಮೆ

ನಮ್ಮ ಉತ್ತರ ನಾಲ್ಕು ವರ್ಷಗಳಿಗೊಮ್ಮೆ ಆಗಿತ್ತು. ಸರಿಯಾದ ಉತ್ತರ ಎರಡು ವರ್ಷಗಳಿಗೊಮ್ಮೆ ತೆರಿಗೆಯನ್ನು ಪರಿಷ್ಕರಿಸಬೇಕು. ಪ್ರಕರಣ 199ಎ ರಡಿ ವಿವರಿಸಲಾಗಿದೆ.

63. ವೆಂಕಟೇಶಪ್ಪ ಮತ್ತು ಆತನ ಕುಟುಂಬವು MGNREGA ಯೋಜನೆಯಡಿ ಉದ್ಯೋಗ ಚೀಟಿಗೆ ನೊಂದಾಯಿಸಿಕೊಂಡಿದೆ. ಆದರೆ ವೆಂಕಟೇಶಪ್ಪನು ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸಿ ಗ್ರಾಮ ಪಂಚಾಯತಿಗೆ ಸದಸ್ಯನಾಗಿ ಆಯ್ಕೆಯಾಗಿದ್ದಾನೆ, ಆದ್ದರಿಂದ ____?

ಅ) ವೆಂಕಟೇಶಪ್ಪನ ಕುಟುಂಬದ ಉದ್ಯೋಗ ಚೀಟಿಯನ್ನು ರದ್ದುಪಡಿಸಬೇಕು

ಆ) ಕೇವಲ ವೆಂಕಟೇಶಪ್ಪನನ್ನು ಮಾತ್ರ ಉದ್ಯೋಗ ಚೀಟಿಯಿಂದ ತೆಗೆಯಬೇಕು

ಇ) ಉದ್ಯೋಗ ಚೀಟಿಯಲ್ಲಿ ಯಾರನ್ನು ರದ್ದು ಮಾಡಬೇಕಿಲ್ಲ

ಈ) ಉದ್ಯೋಗ ಚೀಟಿಯಲ್ಲಿ ವೆಂಕಟೇಶಪ್ಪನ ಹೆಸರಿರಬಹುದು ಆದರೆ ಕೆಲಸ ಮಾಡುವಾಗಿಲ್ಲ

ಉದ್ಯೋಗ ಚೀಟಿಯಲ್ಲಿ ಯಾರನ್ನು ರದ್ದು ಮಾಡಬೇಕಿಲ್ಲ

64. ಈ ಕೆಳಗಿನವುಗಳಲ್ಲಿ ಸರಿಯಾಗಿ ಹೊಂದಾಣಿಕೆಯಾಗಿದಿರುವುದನ್ನು ಗುರುತಿಸಿ:

ಅ) ಜಿ ವಿ ಕೆ ರಾವ್ ಸಮಿತಿ - ಜಿಲ್ಲಾ ಪರಿಷತ್ ಗೆ ಹೆಚ್ಚಿನ ಪ್ರಾಮುಖ್ಯತೆ

ಆ) ಬಲವಂತ್ ರಾಯ್ ಮೆಹ್ತಾ ಸಮಿತಿ - ಮೂರು ಹಂತದ ಪಂಚಾಯತ್ ರಾಜ್

ಇ) ಅಶೋಕ್ ಮೆಹ್ತಾ ಸಮಿತಿ - ಹಳ್ಳಿಗಳ ಸಮೂಹಕ್ಕೆ ನ್ಯಾಯಪಂಚಾಯ್ತಿ ರಚನೆ

ಈ) ಎಲ್ ಎಂ ಸಿಂಘ್ವಿ ಸಮಿತಿ- ಪಂಚಾಯತ್ ಗಳಿಗೆ ಸಂವಿಧಾನಾತ್ಮಕ ಸ್ಥಾನಮಾನ

www.karnatakaexams.com

ಅಶೋಕ್ ಮೆಹ್ತಾ ಸಮಿತಿ - ಹಳ್ಳಿಗಳ ಸಮೂಹಕ್ಕೆ ನ್ಯಾಯಪಂಚಾಯ್ತಿ ರಚನೆ

ಹಳ್ಳಿಗಳ ಸಮೂಹಕ್ಕೆ ನ್ಯಾಯಪಂಚಾಯ್ತಿ ರಚನೆಗೆ ಎಲ್ ಎಂ ಸಿಂಘ್ವಿ ಸಮಿತಿ ಶಿಫಾರಸ್ಸು ಮಾಡಿತ್ತು.

65. ಈ ಕೆಳಗಿನ ಯಾವ ಪ್ರಕರಣದಡಿ ಗ್ರಾಮ ಪಂಚಾಯತಿ ಸದಸ್ಯರಾಗಲು ಅನರ್ಹತೆ ಬಗ್ಗೆ ತಿಳಿಸಲಾಗಿದೆ?

ಅ) ಪ್ರಕರಣ 10

ಆ) ಪ್ರಕರಣ 11

ಇ) ಪ್ರಕರಣ 12

ಈ) ಪ್ರಕರಣ 13

ಪ್ರಕರಣ 12

66. ಗ್ರಾಮ ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷನ ವಿರುದ್ದ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಲು ಬೇಕಾಗಿರುವ ಕೋರಂ ____?

ಅ) ಒಟ್ಟು ಸದಸ್ಯರ ಮೂರನೇ-ಎರಡರಷ್ಟಕ್ಕಿಂತ ಕಡಿಮೆಯಿಲ್ಲದಷ್ಟು

ಆ) ಒಟ್ಟು ಸದಸ್ಯರ ಅರ್ಧಕ್ಕಿಂತ ಕಡಿಮೆಯಿಲ್ಲದಷ್ಟು

ಇ) ಒಟ್ಟು ಸದಸ್ಯರ ಮೂರನೇ-ಒಂದರಷ್ಟಕ್ಕಿಂತ ಕಡಿಮೆಯಿಲ್ಲದಷ್ಟು

ಈ) ಮೇಲಿನ ಯಾವುದು ಅಲ್ಲ

ಒಟ್ಟು ಸದಸ್ಯರ ಅರ್ಧಕ್ಕಿಂತ ಕಡಿಮೆಯಿಲ್ಲದಷ್ಟು

2015 ರ ತಿದ್ದುಪಡಿ ಪ್ರಕಾರ ಗ್ರಾಮ ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷನ ವಿರುದ್ದ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಲು ಒಟ್ಟು ಸದಸ್ಯರ ಅರ್ಧಕ್ಕಿಂತ ಕಡಿಮೆಯಿಲ್ಲದಷ್ಟು ಕೋರಂ ಅಗತ್ಯ.

67. MGNREGA ಯೋಜನೆಯಡಿ ವಿಕಲಚೇತನರು ಮತ್ತು 60 ವರ್ಷ ಮೇಲ್ಪಟ್ಟವರು ______?

ಅ) ನೋಂದಾಯಿಸಿಕೊಳ್ಳಲಾಗುವುದಿಲ್ಲ

ಆ) ಗ್ರಾಮ ಸಭೆ ಅನುಮೋದನೆ ಮೇಲೆ ನೋಂದಾಯಿಸಿಕೊಳ್ಳಬಹುದು

ಇ) ನೋಂದಾಯಿಸಿಕೊಳ್ಳಬಹುದು

ಈ) ಜಿಲ್ಲಾ ಪಂಚಾಯತಿ ಒಪ್ಪಿದರೆ ನೋಂದಾಯಿಸಿಕೊಳ್ಳಬಹುದು

ನೋಂದಾಯಿಸಿಕೊಳ್ಳಬಹುದು

68. ಗ್ರಾಮ ಪಂಚಾಯತ್ ಸದಸ್ಯರ ಕರ್ತವ್ಯಗಳು ಮತ್ತು ಜವಾಬ್ದಾರಿಯನ್ನು ಪಂಚಾಯತ್ ರಾಜ್ ಅಧಿನಿಯಮದ ಯಾವ ಅಧ್ಯಾಯನದಡಿ ಉಲ್ಲೇಖಿಸಲಾಗಿದೆ?

www.karunaduexams.com

ಅ) ಅಧ್ಯಾಯ III

ಆ) ಅಧ್ಯಾಯ IV

ಇ) ಅಧ್ಯಾಯ IVಎ

ಈ) ಅಧ್ಯಾಯ V

ಅಧ್ಯಾಯ IVಎ

2015ರ ತಿದ್ದುಪಡಿಯಲ್ಲಿ ಅಧ್ಯಾಯ IVಎ ಅನ್ನು ಸೇರ್ಪಡೆಗೊಳಿಸಿ ಗ್ರಾಮ ಪಂಚಾಯತ್ ಸದಸ್ಯರ ಕರ್ತವ್ಯಗಳು ಮತ್ತು ಜವಾಬ್ದಾರಿಯನ್ನು ಉಲ್ಲೇಖಿಸಲಾಗಿದೆ.

69. MGNREGA ಯೋಜನೆಯಡಿ ಕೆಲಸಕ್ಕಾಗಿ ಅರ್ಜಿ ಸಲ್ಲಿಸಲಾದ ಕೂಲಿ ಕಾರ್ಮಿಕರಿಗೆ ಕೆಲಸಕ್ಕೆ ಹಾಜರಾಗುವಂತೆ ಯಾವ ನಮೂನೆಯಲ್ಲಿ ತಿಳಿಸಬೇಕು?

ಅ) ನಮೂನೆ 3

ಆ) ನಮೂನೆ 5

ಇ) ನಮೂನೆ 8

ಈ) ನಮೂನೆ 9

ನಮೂನೆ 8

70. ಈ ಕೆಳಗಿನ ಯಾವ ಸಚಿವಾಲಯ "ಸ್ವಚ್ಛ ಸರ್ವೇಕ್ಷಣಾ" ಸಮೀಕ್ಷೆಯನ್ನು ಬಿಡುಗಡೆಗೊಳಿಸುತ್ತಿದೆ?

ಅ) ಕೇಂದ್ರ ಗ್ರಾಮೀಣಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ಆ) ಕೇಂದ್ರ ಕುಡಿಯುವ ನೀರು ಮತ್ತು ನೈರ್ಮಲ್ಯ ಸಚಿವಾಲಯ

ಇ) ಕೇಂದ್ರ ನಗರಾಭಿವೃದ್ಧಿ ಸಚಿವಾಲಯ

ಈ) ಕೇಂದ್ರ ಗೃಹ ಸಚಿವಾಲಯ

ಕೇಂದ್ರ ನಗರಾಭಿವೃದ್ಧಿ ಸಚಿವಾಲಯ

ಸ್ವಚ್ಛ ಸರ್ವೇಕ್ಷಣಾ ಸಮೀಕ್ಷೆಯನ್ನು ಕೇಂದ್ರ ನಗರಾಭಿವೃದ್ಧಿ ಸಚಿವಾಲಯ ನಡೆಸುತ್ತಿದೆ.

71. ಇವುಗಳಲ್ಲಿ ಗ್ರಾಮೀಣ ಭಾಗದ ಬಡವರಿಗೆ ವಸತಿ ಯೋಜನೆ ಆಗಿಲ್ಲದಿರುವುದು _______?

ಅ) ನನ್ನ ಮನೆ ಯೋಜನೆ

ಆ) ಬಸವ ವಸತಿ ಯೋಜನೆ

ಇ) ಪ್ರಧಾನ ಮಂತ್ರಿ ಆವಾಸ್ ಯೋಜನೆ

ಈ) ಡಾ ಬಿ ಆರ್ ಅಂಬೇಡ್ಕರ್ ನಿವಾಸ ಯೋಜನೆ

www.karunaduexams.com

ನನ್ನ ಮನೆ ಯೋಜನೆ

ನನ್ನ ಮನೆ ಯೋಜನೆ ವಾರ್ಷಿಕ ಆದಾಯ 1 ಲಕ್ಷದವರೆಗೆ ಕಡಿಮೆ ಇರುವ ಆಟೋ ಚಾಲಕರು, ಚಿತ್ರ ಉದ್ಯಮದಲ್ಲಿ ಕಾರ್ಯನಿರ್ವಹಿಸುವರಿಗೆ ಮತ್ತು ಬೀಡಿ ಕಾರ್ಮಿಕರಿಗೆ ಇರುವ ಯೋಜನೆ ಆಗಿದೆ.

72. ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಗಮ ಯಾವ ದಿನಾಂಕದಿಂದ ಪ್ರಾರಂಭಗೊಂಡಿದೆ?

ಅ) 15ನೇ ಆಗಸ್ಟ್ 1970

ಆ) 10 ಅಕ್ಟೋಬರ್ 1978

ಇ) 9ನೇ ಆಗಸ್ಟ್ 1974

ಈ) 11ನೇ ಜನವರಿ 1980

9ನೇ ಆಗಸ್ಟ್ 1974

73. ಸರ್ಕಾರವು 14ನೇ ಹಣಕಾಸು ಆಯೋಗದಡಿ ಅನುದಾನವನ್ನು ಗ್ರಾಮ ಪಂಚಾಯತಿಗಳಿಗೆ _____?

ಅ) ನೇರವಾಗಿ ಬಿಡುಗಡೆ ಮಾಡಲಾಗುತ್ತಿದೆ

ಆ) ಜಿಲ್ಲಾ ಪಂಚಾಯತಿಯಿಂದ ಬಿಡುಗಡೆ ಮಾಡಲಾಗುತ್ತಿದೆ

ಇ) ತಾಲ್ಲೂಕು ಪಂಚಾಯತಿಗಳಿಂದ ಬಿಡುಗಡೆ ಮಾಡಲಾಗುತ್ತಿದೆ

ಈ) ಮೇಲಿನ ಯಾವುದು ಅಲ್ಲ

ನೇರವಾಗಿ ಬಿಡುಗಡೆ ಮಾಡಲಾಗುತ್ತಿದೆ

74. ಸುವರ್ಣ ಗ್ರಾಮ ಯೋಜನೆಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

I) ಈ ಯೋಜನೆಯಡಿ ಗ್ರಾಮಗಳನ್ನು 2011ರ ಜನಗಣತಿ ಆಧಾರದ ಮೇಲೆ ಆಯ್ಕೆಮಾಡಲಾಗುತ್ತದೆ

II) ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕರುಗಳಿಗೆ ಹಳ್ಳಿಗಳನ್ನು ಆಯ್ಕೆಮಾಡುವ ಅಧಿಕಾರ ನೀಡಲಾಗಿದೆ

III) ಇದುವರೆಗೆ ಒಟ್ಟು ಐದು ಹಂತದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ

ಈ ಕೆಳಗೆ ನೀಡಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಗುರುತಿಸಿ:

ಅ) I & II

ಆ) II & III

ಇ) I & III

ಈ) I, II & III

II & III

ಈ ಯೋಜನೆಯಡಿ ಗ್ರಾಮಗಳನ್ನು 2001ರ ಜನಗಣತಿ ಆಧಾರದ ಮೇಲೆ ಆಯ್ಕೆಮಾಡಲಾಗುತ್ತದೆ.

www.karunaduexams.com

75. ನಿರ್ಮಲ ಗ್ರಾಮ ಪುರಸ್ಕರ ಪಡೆದ ಕರ್ನಾಟಕದ ಮೊದಲ ಜಿಲ್ಲೆ ಯಾವುದು?

ಅ) ಕೊಡಗು

ಆ) ಉಡುಪಿ

ಇ) ದಕ್ಷಿಣ ಕನ್ನಡ

ಈ) ಮೈಸೂರು

ದಕ್ಷಿಣ ಕನ್ನಡ

76. ರಾಜ್ಯ ಸರ್ಕಾರದ ಸೌರ ಬೆಳಕು ಯೋಜನೆಯ ಉದ್ದೇಶ ______?

ಅ) ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸೌರ ಬೀದಿದೀಪ ಅಳವಡಿಸುವುದು

ಆ) ಗ್ರಾಮ ಪಂಚಾಯತಿ SC/ST ಕುಟುಂಬಗಳಿಗೆ ಸೌರ ದೀಪ ಅಳವಡಿಸುವುದು

ಇ) ತಾಲ್ಲೂಕ ಪಂಚಾಯತಿ ಕೇಂದ್ರಗಳಿಗೆ ಸೌರ ಫಲಕ ಅಳವಡಿಸುವುದು

ಈ) ಜಿಲ್ಲಾ ಪಂಚಾಯತಿ ಕಚೇರಿಗಳಿಗೆ ಸೌರ ಫಲಕ ಅಳವಡಿಸುವುದು

ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸೌರ ಬೀದಿದೀಪ ಅಳವಡಿಸುವುದು

77. MGNREGA ಯೋಜನೆಯಡಿ ಕೈಗೊಳ್ಳಬೇಕಾದ ಕಾಮಗಾರಿಗಳನ್ನು ಯಾವ ಸಭೆಯಲ್ಲಿ ಆಯ್ಕೆಮಾಡಬೇಕು?

ಅ) ಗ್ರಾಮ ಪಂಚಾಯತಿ ಸಾಮಾನ್ಯ ಸಭೆ

ಆ) ಗ್ರಾಮ ಸಭೆ

ಇ) ಗ್ರಾಮ ಪಂಚಾಯತಿ ವಿಶೇಷ ಸಭೆ

ಈ) ತಾಲ್ಲೂಕ ಪಂಚಾಯತಿ ಸಭೆ

ಗ್ರಾಮ ಸಭೆ

78. ಕರ್ನಾಟಕದಲ್ಲಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM)ವನ್ನು ಯಾವ ಹೆಸರಿನಡಿ ಅನುಷ್ಠಾನಗೊಳಿಸಲಾಗುತ್ತಿದೆ?

ಅ) ಸ್ತ್ರೀಶಕ್ತಿ

ಆ) ಸಂಜೀವಿನಿ

ಇ) ರಾಜೀವ್ ಚೈತನ್ಯ ಯೋಜನೆ

ಈ) ದುಡಿಮೆ-ಹಿರಿಮೆ

ಸಂಜೀವಿನಿ

www.karunaduexams.com

79. ಗ್ರಾಮ ಪಂಚಾಯತಿಗಳು ಈ ಕೆಳಗಿನ ಯಾವುದನ್ನು ಸಂಗ್ರಹಿಸುವ ಅಧಿಕಾರ ಹೊಂದಿವೆ?

I) ಕಟ್ಟಡ ಮತ್ತು ಭೂಮಿ ಮೇಲಿನ ತೆರಿಗೆ

II) ಮಾರುಕಟ್ಟೆ ಶುಲ್ಕ

III) ಬಸ್ ನಿಲ್ದಾಣ ಮತ್ತು ಜಾನುವಾರು ಮೇಯಿಸುವ ಜಾಗದ ಶುಲ್ಕ

IV) ಮನರಂಜನೆ ತೆರಿಗೆ

ಸರಿಯಾದ ಉತ್ತರವನ್ನು ಈ ಕೆಳಗೆ ನೀಡಿರುವ ಕೋಡ್ ಮೂಲಕ ಆರಿಸಿ:

ಅ) I, II & III

ಆ) I, III & IV

ಇ) I & III

ಈ) I, II, III & IV

I, II, III & IV

80. ಯಾವುದೇ ವ್ಯಕ್ತಿಯು ಪಂಚಾಯತಿಗೆ ಬಾಕಿ ಇರುವ ತೆರಿಗೆ, ಫೀಜು ಅಥವಾ ಇತರೆ ಯಾವುದೇ ಮೊತ್ತವನ್ನು ಸಂದಾಯ ಮಾಡಲು ತಪ್ಪಿದರೆ ಪಂಚಾಯತಿಯು ಆತನಿಗೆ ಯಾವ ಆದೇಶ ನೀಡಬೇಕು?

ಅ) ವಸೂಲಾತಿ ಆದೇಶ

ಆ) ತಗಾದೆ ಆದೇಶ

ಇ) ಬಾಕಿ ಆದೇಶ

ಈ) ಬಡ್ಡಿ ಆದೇಶ

ತಗಾದೆ ಆದೇಶ

81. ಗ್ರಾಮ ಪಂಚಾಯತಿಯ ಯಾವುದೇ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಸದಸ್ಯನನ್ನು ತೆಗೆದು ಹಾಕಲಾದ ಸಂದರ್ಭದಲ್ಲಿ ಆತನು ಯಾವುದೇ ಪಂಚಾಯತ್ ಮುಂದಿನ ಎಷ್ಟು ವರ್ಷಗಳವರೆಗೆ ಸ್ಪರ್ಧಿಸಲು ಅನರ್ಹನಾಗಿರುತ್ತಾನೆ?

ಅ) ನಾಲ್ಕು

ಆ) ಐದು

ಇ) ಆರು

ಈ) ಹತ್ತು

ಆರು

ಗ್ರಾಮ ಪಂಚಾಯತಿಯ ಯಾವುದೇ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಸದಸ್ಯನನ್ನು ತೆಗೆದು ಹಾಕಲಾದ ಸಂದರ್ಭದಲ್ಲಿ ಆತನು ಮುಂದಿನ ಆರು ವರ್ಷಗಳವರೆಗೆ ಸ್ಪರ್ಧಿಸಲು ಅನರ್ಹನಾಗಿರುತ್ತಾನೆ.

www.karunaduexams.com

82. ಈ ಕೆಳಗಿನವುಗಳಲ್ಲಿ ಸರಿಯಾಗಿ ಹೊಂದಾಣಿಕೆಯಾಗದಿರುವುದನ್ನು ಗುರುತಿಸಿ:

ಅ) ಪ್ರಕರಣ 58ಬಿ- ಮಾನವ ಘನತೆಗೆ ಕಳಂಕ ತರುವ ಪದ್ಧತಿಗಳನ್ನು ಪ್ರತಿಬಂಧಿಸುವುದು ನಿಷೇಧಿಸುವುದು

ಆ) ಪ್ರಕರಣ 58ಸಿ- ಜೀತ ಪದ್ದತಿಯನ್ನು ನಿರ್ಮೂಲನೆಗೊಳಿಸುವುದು

ಇ) ಪ್ರಕರಣ 58ಡಿ- ಗ್ರಾಮ ಪಂಚಾಯತಿ ಸ್ವತ್ತನ್ನು ಪುನಃ ಸ್ವಾಧೀನ ಪಡೆಯುವುದು

ಈ) ಪ್ರಕರಣ 58ಎಫ್- ಅಪಾಯಕಾರಿ ಕಲ್ಲುಗಣಿಕಾರಿಕೆ ನಿಷೇಧ

ಪ್ರಕರಣ 58ಸಿ- ಜೀತ ಪದ್ದತಿಯನ್ನು ನಿರ್ಮೂಲನೆಗೊಳಿಸುವುದು

58ಎ ಜೀತ ಪದ್ದತಿಯನ್ನು ನಿರ್ಮೂಲನೆಗೊಳಿಸುವುದಾಗಿದೆ.

83. ಗ್ರಾಮ ವಿಕಾಸ ಯೋಜನೆಗೆ ಸಂಬಂಧಿಸಿದಂತೆ ಈ ಕೆಳಕಂಡ ಯಾವ ಹೇಳಿಕೆ ತಪ್ಪಾಗಿದೆ?

ಅ) ಪ್ರತಿ ಗ್ರಾಮೀಣ ವಿಧಾನಸಭಾ ಕ್ಷೇತ್ರದಡಿ ಗರಿಷ್ಠ 5000 ಜನಸಂಖ್ಯೆ ಮಿತಿಯೊಳಗೆ ಗರಿಷ್ಠ 5 ಗ್ರಾಮಗಳನ್ನು ಆಯ್ಕೆಮಾಡಬೇಕು

ಆ) ಇದರಲ್ಲಿ ಪರಿಶಿಷ್ಠ ಜಾತಿ/ಪಂಗಡ ಜನರು ಹೆಚ್ಚು ವಾಸಿಸುವ ಕನಿಷ್ಠ 2 ಗ್ರಾಮಗಳು ಕಡ್ಡಾಯವಾಗಿ ಆಯ್ಕೆಮಾಡುವುದು

ಇ) ಗ್ರಾಮಗಳನ್ನು ಜಿಲ್ಲಾ ಪಂಚಾಯತಿ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು ಆಯ್ಕೆಮಾಡುವುದು

ಈ) ಆಯ್ಕೆಮಾಡುವ ಗ್ರಾಮಗಳು ಈ ಹಿಂದೆ ಯಾವುದೇ ಯೋಜನೆಯಡಿ ಆಯ್ಕೆಯಾಗಿರಬಾರದು

ಗ್ರಾಮ ವಿಕಾಸ ಯೋಜನೆಯಡಿ ಶಾಸಕರು ಗ್ರಾಮಗಳನ್ನು ಆಯ್ಕೆ ಮಾಡುತ್ತಾರೆ. ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು ಆಯ್ಕೆಮಾಡುಲು ಸಹಕರಿಸುತ್ತಾರೆ.

84. “ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ತಿದ್ದುಪಡಿ” ಸಮಿತಿಯ ಅಧ್ಯಕ್ಷರಾಗಿದ್ದವರು _____?

ಅ) ನಂಜಯ್ಯನ ಮಠ

ಆ) ಕೆ. ಆರ್.ರಮೇಶ್ ಕುಮಾರ್

ಇ) ಹೆಚ್.ಕೆ.ಪಾಟೀಲ್

ಈ) ವಿಜಯ ಭಾಸ್ಕರ್

ಕೆ. ಆರ್.ರಮೇಶ್ ಕುಮಾರ್

85. ಯಾವ ಸಾಲಿನ ಆಯವ್ಯಯದಲ್ಲಿ ಗ್ರಾಮ ವಿಕಾಸ ಯೋಜನೆಯನ್ನು ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ ಪ್ರಾರಂಭಿಸಲು ಘೋಷಿಸಲಾಗಿದೆ?

ಅ) 2012-13

www.karunaduexams.com

ಆ) 2013-14

ಇ) 2014-15

ಈ) 2015-16

2014-15

ಗ್ರಾæªÀÄUÀ¼À ¸ÀªÀÄUÀæ C©üªÀÈ¢ÞAiÀÄ£ÀÄß UÀªÀÄ£ÀzÀ°èlÄÖPÉÆAqÀÄ 2014-15£ÉÃ ¸Á°£À CAiÀÄªÀåAiÀÄzÀ°è "UÁæªÀÄ «PÁ¸À" AiÉÆÃd£ÉAiÀÄ£ÀÄß gÁdåzÀ 189 UÁæ«ÄÃt «zsÁ£À¸À¨sÁ ªÀÄvÀPÉëÃvÀæUÀ¼À ªÁå¦ÛAiÀÄ°è ¥ÁægÀA©ü¸À®Ä WÉÆÃ¶¸À¯ÁVzÉ. CzÀgÀAvÉ "UÁæªÀÄ «PÁ¸À" AiÉÆÃd£ÉAiÀÄr ¥Àæw «zsÁ£À¸À¨sÁ PÉëÃvÀæzÀ ªÁå¦ÛAiÀÄ°è ¥Àj²µÀÖ eÁw / ¥Àj²µÀÖ ¥ÀAUÀqÀzÀ d£ÀgÀÄ ºÉZÀÄÄÑ ªÁ¹¸ÀÄªÀ 2 UÁæªÀÄUÀ¼ÀÄ ¸ÉÃj MlÄÖ 5 UÁæªÀÄUÀ¼À ¸ÀªÀðvÉÆÃªÀÄÄR C©üªÀÈ¢Þ ¸Á¢ü¸À®Ä 3 ªÀµÀðzÀ AiÉÆÃd£ÉAiÀÄ£ÀÄß eÁjUÉ vÀgÀ¯ÁVzÉ. 2011gÀ d£À¸ÀASÉåAiÀÄ£ÀÄß DzsÀj¹ ¥Àæw UÁæ«ÄÃt «zsÁ£À¸À¨sÁ ªÀÄvÀPÉëÃvÀæPÉÌ UÀjµÀ× 5000 d£À¸ÀASÉåAiÀÄÄ¼Àî UÀjµÀ× 5 UÁæªÀÄUÀ½UÉ UÁæªÀÄzÀ C©üªÀÈ¢ÞUÉ vÀ¯Á£ÀÄzÁ£À gÀÆ.7,500/- gÀAvÉ ¥Àæw UÁæ«ÄÃt «zsÁ£À¸À¨sÁ ªÀÄvÀPÉëÃvÀæPÉÌ MlÄÖ 5000 d£À¸ÀASÉåAiÀÄÄ¼Àî UÀjµÀ× 5 UÁæªÀÄUÀ½UÉ UÀjµÀÖ gÀÆ.3.75 PÉÆÃnUÀ¼À£ÀÄß ºÀAaPÉ ªÀiÁqÀ¯ÁUÀÄwÛzÉ.

86. ಈ ಕೆಳಗಿನ ಯೋಜನೆಗಳನ್ನು ಗಮನಿಸಿ

I) ರಾಷ್ಟ್ರೀಯ ಗ್ರಾಮ ಸ್ವರಾಜ್ ಯೋಜನೆ

II) ಪಂಚಾಯತ್ ಮಹಿಳಾ ಏವಂ ಯುವ ಶಕ್ತಿ ಅಭಿಯಾನ (PMESYA)

III) ಪಂಚಾಯತ್ ಎಂಪರಮೆಂಟ್ ಅಕೌಂಟಬಲಿಟಿ ಇನ್ ಸೆಂಟಿವೇಸೇಶನ್ ಸ್ಕೀಮ್ (PEAIS)

ಮೇಲಿನ ಯಾವ ಯೋಜನೆಗಳನ್ನು ವಿಲೀನಗೊಳಿಸಿ ರಾಜೀವ್ ಗಾಂಧಿ ಪಂಚಾಯತಿ ಸಶಕ್ತಿಕರಣ್ ಅಭಿಯಾನ ಜಾರಿಗೊಳಿಸಲಾಗಿದೆ?

ಅ) I ಮಾತ್ರ

ಆ) II & III ಮಾತ್ರ

ಇ) I & III ಮಾತ್ರ

ಈ) I II & III

I II & III

ಮೇಲಿನ ಎಲ್ಲಾ ಯೋಜನೆಗಳನ್ನು ವಿಲೀನಗೊಳಿಸಿ ರಾಜೀವ್ ಗಾಂಧಿ ಪಂಚಾಯತಿ ಸಶಕ್ತಿಕರಣ್ ಅಭಿಯಾನ ಜಾರಿಗೊಳಿಸಲಾಗಿದೆ.

87. ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಹೇಳಿಕೆಗಳನ್ನು ಗಮನಿಸಿ:

I) ಇದು ಕೇಂದ್ರ ಪುರಸ್ಕೃತ ಯೋಜನೆಯಾಗಿದೆ

II) 1990-1991ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ

III) ಶೇ 100% ಮಹಿಳೆಯರಿಗಾಗಿ ಇರುವ ಕಾರ್ಯಕ್ರಮವಾಗಿದೆ

ಮೇಲಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆಗಳು ಯಾವುವು?

ಅ) I & II

ಆ) I & III

ಇ) II & III

ಈ) I, II & III

I & III

1982-1983ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ.

88. ಬಸವ ವಸತಿ ಯೋಜನೆಯಡಿ ಮನೆ ನಿರ್ಮಾಣಕ್ಕೆ ವೆಚ್ಚವನ್ನು ಗರಿಷ್ಠ ರೂ_____ ಲಕ್ಷಗಳವರೆಗೆ ಮಾತ್ರ ಅವಕಾಶ ನೀಡಲಾಗಿದೆ?

ಅ) ರೂ 2,00,000 ಲಕ್ಷ

ಆ) ರೂ 3,00,000 ಲಕ್ಷ

ಇ) ರೂ 4,00,000 ಲಕ್ಷ

ಈ) ರೂ 5,00,000 ಲಕ್ಷ

ರೂ 5,00,000 ಲಕ್ಷ

89. ಕರ್ನಾಟಕದಲ್ಲಿ ಗ್ರಾಮ ಪಂಚಾಯತಿವಾರು ಮಾನವ ಅಭಿವೃದ್ಧಿ ಸೂಚ್ಯಂಕ ವರದಿಯನ್ನು ಹೊರ ತಂದ ಸಂಸ್ಥೆ _____?

ಅ) ಗ್ರಾಮೀಣಾಭಿವೃದ್ಧಿ ಮಂತ್ರಾಲಯ

ಆ) ಎಸ್ಐಆರ್ ಡಿ

ಇ) ಅಂಕಿ-ಅಂಶ ಇಲಾಖೆ

ಈ) ಕೇಂದ್ರ ಗೃಹ ಸಚಿವಾಲಯ

ಎಸ್ಐಆರ್ ಡಿ

ಅಬ್ದುಲ್ ನಜೀರ್ ಸಾಬ್ ಗ್ರಾಮೀಣಭಿವೃದ್ಧಿ ಸಂಸ್ಥೆ (ಎಸ್ಐಆರ್ ಡಿ) ಮೈಸೂರು ಕರ್ನಾಟಕದಲ್ಲಿ ಗ್ರಾಮ ಪಂಚಾಯತಿವಾರು ಮಾನವ ಅಭಿವೃದ್ಧಿ ಸೂಚ್ಯಂಕ ವರದಿಯನ್ನು ಹೊರ ತಂದಿದೆ.

90. RGPSA ಎಂದರೆ _______?

www.karunaduexams.com

ಅ) Rajiv Gandhi Panchayat Sashaktikaran Abhiyan

ಆ) Rajiv Gandhi Panchayat Survekshan Abhiyan

ಇ) Rajiv Gandhi Panchayat SthreeShakti Abhiyan

ಈ) Rajiv Gandhi Panchayat SocialAudit Abhiyan

Rajiv Gandhi Panchayat Sashaktikaran Abhiyan

91. ಗ್ರಾಮ ಪಂಚಾಯತಿಗಳಿಗೆ ಸರ್ಕಾರ ನೀಡುವ ಶಾಸನ ಬದ್ದ ಅನುದಾನಕ್ಕೆ ಸಂಬಂಧಿಸಿದಂತೆ ಹೇಳಿಕೆಗಳನ್ನು ಗಮನಿಸಿ:

I) ಜನಸಂಖ್ಯೆಗೆ ಅನುಗುಣವಾಗಿ ಶಾಸನಬದ್ಧ ಅನುದಾನವನ್ನು ಬಿಡುಗಡೆಗೊಳಿಸಲಾಗುತ್ತದೆ.

II) ಈ ಅನುದಾನದಲ್ಲಿ ಶೇಕಡ 60 ರಷ್ಟನ್ನು ಗ್ರಾಮ ಪಂಚಾಯಿತಿಗಳ ಚಾಲ್ತಿ ತಿಂಗಳುಗಳ ವಿದ್ಯುಚ್ಛಕ್ತಿ ಬಿಲ್ ಪಾವತಿಗಾಗಿ ಮತ್ತು ಶೇಕಡ 40ರಷ್ಟನ್ನು ಗ್ರಾಮ ಪಂಚಾಯಿತಿ ನೌಕರರ ವೇತನಕ್ಕಾಗಿ ಬಳಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ

ಮೇಲಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ/ಹೇಳಿಕೆಗಳು ಯಾವುವು?

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಎರಡು ಹೇಳಿಕೆ ಸರಿ

ಈ) ಎರಡು ಹೇಳಿಕೆ ತಪ್ಪು

ಎರಡು ಹೇಳಿಕೆ ಸರಿ

92. ರಾಜೀವ್ ಗಾಂಧಿ ಪಂಚಾಯತಿ ಸಶಕ್ತಿಕರಣ್ ಅಭಿಯಾನ (RGPSA) ಸಂಬಂಧಿಸಿದಂತೆ ಹೇಳಿಕೆಗಳನ್ನು ಗಮನಿಸಿ:

I) RGPSA ಕೇಂದ್ರ ಪುರಸ್ಕೃತ ಯೋಜನೆಯಾಗಿದೆ

II) ಈ ಯೋಜನೆಯನ್ನು 12ನೇ ಪಂಚವಾರ್ಷಿಕಯಲ್ಲಿ 2012-13 ಸಾಲಿನಿಂದ ಜಾರಿಗೊಳಿಸಲಾಗಿದೆ

III) ಪಂಚಾಯತ್ ರಾಜ್ ವ್ಯವಸ್ಥೆಯನ್ನು ಬಲಪಡಿಸುವುದು ಇದರ ಪ್ರಮುಖ ಉದ್ದೇಶವಾಗಿದೆ

ಕೆಳಗೆ ನೀಡಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಗುರುತಿಸಿ:

ಅ) I

ಆ) I & II

ಇ) II & III

ಈ) I II & III

I II & III

ಮೇಲಿನ ಎಲ್ಲಾ ಹೇಳಿಕೆಗಳು ಸರಿಯಾಗಿವೆ.

www.karunaduexams.com

93. ಈ ಕೆಳಕಂಡ ಹೇಳಿಕೆಗಳನ್ನು ಗಮನಿಸಿ:

I) ಗ್ರಾಮ ವಿಕಾಸ ಯೋಜನೆಯಡಿ ಗ್ರಾಮ ವಿಕಾಸ ಯೋಜನೆಯ ಉಸ್ತುವಾರಿ ಸಭೆಯನ್ನು ಸ್ಥಳೀಯ ಶಾಸಕರು ವಹಿಸುವುದು

II) ಗ್ರಾಮ ವಿಕಾಸ ಯೋಜನೆಯ ಉಸ್ತುವಾರಿ ಸಭೆಯನ್ನು ಕಡ್ಡಾಯವಾಗಿ ಎರಡು ತಿಂಗಳಿಗೊಮ್ಮೆ ನಡೆಸಬೇಕು

III) ಈ ಯೋಜನೆಯಡಿ ಕೈಗೊಳ್ಳವು ಕಾಮಗಾರಿಗಳನ್ನು ಗ್ರಾಮಸಭೆಯಲ್ಲಿ ಆಯ್ಕೆಮಾಡುವುದು

ಈ ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

ಅ) I & II

ಆ) II & III

ಇ) I & III

ಈ) ಮೇಲಿನ ಎಲ್ಲವೂ

ಮೇಲಿನ ಎಲ್ಲಾ ಹೇಳಿಕೆಗಳು ಸರಿಯಾಗಿವೆ.

94. ಗ್ರಾಮ ವಿಕಾಸ ಯೋಜನೆಯಡಿ ಪ್ರತಿ ಗ್ರಾಮದ ಜನಸಂಖ್ಯೆಗೆ ತಲಾನುದಾನ ರೂ ____ ರಂತೆ ಅನುದಾನ ಹಂಚಿಕೆ ಮಾಡಲಾಗುವುದು?

ಅ) ರೂ 2500

ಆ) ರೂ 5000

ಇ) ರೂ 6000

ಈ) ರೂ 7500

ರೂ 7500

2011gÀ d£À¸ÀASÉåAiÀÄ£ÀÄß DzsÀj¹ ¥Àæw UÁæ«ÄÃt «zsÁ£À¸À¨sÁ ªÀÄvÀPÉëÃvÀæPÉÌ UÀjµÀ× 5000 d£À¸ÀASÉåAiÀÄÄ¼Àî UÀjµÀ× 5 UÁæªÀÄUÀ½UÉ UÁæªÀÄzÀ C©üªÀÈ¢ÞUÉ vÀ¯Á£ÀÄzÁ£À gÀÆ.7,500/- gÀAvÉ ¥Àæw UÁæ«ÄÃt «zsÁ£À¸À¨sÁ ªÀÄvÀPÉëÃvÀæPÉÌ MlÄÖ 5000 d£À¸ÀASÉåAiÀÄÄ¼Àî UÀjµÀ× 5 UÁæªÀÄUÀ½UÉ UÀjµÀÖ gÀÆ.3.75 PÉÆÃnUÀ¼À£ÀÄß ºÀAaPÉ ªÀiÁqÀ¯ÁUÀÄwÛzÉ.

95. ಗ್ರಾಮ ವಿಕಾಸ ಯೋಜನೆಗೆ ಸಂಬಂಧಿಸಿದಂತೆ ಈ ಕೆಳಕಂಡ ಯಾವ ಹೇಳಿಕೆ ತಪ್ಪಾಗಿದೆ?

ಅ) ಪ್ರತಿ ಗ್ರಾಮೀಣ ವಿಧಾನಸಭಾ ಕ್ಷೇತ್ರದಡಿ ಗರಿಷ್ಠ 5000 ಜನಸಂಖ್ಯೆ ಮಿತಿಯೊಳಗೆ ಗರಿಷ್ಠ 5 ಗ್ರಾಮಗಳನ್ನು ಆಯ್ಕೆಮಾಡಬೇಕು

www.karunaduexams.com

ಆ) ಇದರಲ್ಲಿ ಪರಿಶಿಷ್ಟ ಜಾತಿ/ಪಂಗಡ ಜನರು ಹೆಚ್ಚು ವಾಸಿಸುವ ಕನಿಷ್ಠ 2 ಗ್ರಾಮಗಳು ಕಡ್ಡಾಯವಾಗಿ ಆಯ್ಕೆಮಾಡುವುದು

ಇ) ಗ್ರಾಮಗಳನ್ನು ಜಿಲ್ಲಾ ಪಂಚಾಯತಿ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು ಆಯ್ಕೆಮಾಡುವುದು

ಈ) ಆಯ್ಕೆಮಾಡುವ ಗ್ರಾಮಗಳು ಈ ಹಿಂದೆ ಯಾವುದೇ ಯೋಜನೆಯಡಿ ಆಯ್ಕೆಯಾಗಿರಬಾರದು

ಈ ಪ್ರಶ್ನೆ ಪುನರಾವರ್ತನೆಯಾಗಿದೆ. ಮೇಲೆ ಇದಕ್ಕೆ ಉತ್ತರ ತಿಳಿಸಲಾಗಿದೆ.

96. ಗ್ರಾಮ ಪಂಚಾಯತಿ, ತಾಲ್ಲೂಕ ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳ ಅಧಿಕಾರ ಮತ್ತು ಕಾರ್ಯಗಳನ್ನು ವಿವರಿಸುವ ಪ್ರಕರಣಗಳು ಕ್ರಮವಾಗಿ _____?

ಅ) 58, 145 ಮತ್ತು 184

ಆ) 58, 150 ಮತ್ತು 195

ಇ) 64, 120 ಮತ್ತು 200

ಈ) 72, 132 ಮತ್ತು 187

58, 145 ಮತ್ತು 184

ಗ್ರಾಮ ಪಂಚಾಯತಿ, ತಾಲ್ಲೂಕ ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳ ಅಧಿಕಾರ ಮತ್ತು ಕಾರ್ಯಗಳನ್ನು ವಿವರಿಸುವ ಪ್ರಕರಣಗಳು ಕ್ರಮವಾಗಿ 58, 145 ಮತ್ತು 184.

97. ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ ____ ರಂತೆ ಪ್ರತಿ ಗ್ರಾಮ ಪಂಚಾಯತಿ ಮುಂದಿನ ಆರ್ಥಿಕ ವರ್ಷದ ಬಜೆಟ್ ಅನ್ನು ತಯಾರಿಸಿ ಅಂಗೀಕರಿಸತಕ್ಕದ್ದು?

ಅ) 210

ಆ) 220

ಇ) 241

ಈ) 244

241

ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 241 ರಂತೆ ಪ್ರತಿ ಗ್ರಾಮ ಪಂಚಾಯತಿ ಮುಂದಿನ ಆರ್ಥಿಕ ವರ್ಷದ ಬಜೆಟ್ ಅನ್ನು ತಯಾರಿಸಿ ಅಂಗೀಕರಿಸತಕ್ಕದ್ದು.

98. ಗ್ರಾಮ ಪಂಚಾಯತಿಯಲ್ಲಿ ತೆರಿಗೆ ಮನ್ನಾ ಮಾಡುವ ಮೊತ್ತ ರೂ ____ಮೀರಿದಲ್ಲಿ ತಾಲ್ಲೂಕ ಪಂಚಾಯತಿ ಅನುಮೋದನೆ ಪಡೆದು ಮನ್ನಾ ಮಾಡುವುದು.

ಅ) ರೂ 500

ಆ) ರೂ 1000

www.karunaduexams.com

ಇ) ರೂ 1500

ಈ) ರೂ 2000

ರೂ 1000

99. ಈ ಕೆಳಗಿನ ಯಾವುವು ಗ್ರಾಮ ಸ್ವರಾಜ್ ಘಟಕಗಳು ಆಗಿವೆ?

I) ಜನವಸತಿ ಸಭಾ

II) ಮಹಿಳಾ ಗ್ರಾಮ ಸಭಾ

III) ವಾರ್ಡ್ ಸಭಾ

IV) ಗ್ರಾಮ ಸಭಾ

ಸರಿಯಾದ ಉತ್ತರವನ್ನು ಈ ಕೆಳಗೆ ನೀಡಿರುವ ಕೋಡ್ ಮೂಲಕ ಗುರುತಿಸಿ:

ಅ) I & III

ಆ) I, II & III

ಇ) I, III & IV

ಈ) ಮೇಲಿನ ಎಲ್ಲವೂ

I, III & IV

ಜನವಸತಿ ಸಭಾ, ವಾರ್ಡ್ ಸಭಾ ಮತ್ತು ಗ್ರಾಮ ಸಭಾಗಳು ಗ್ರಾಮ ಸ್ವರಾಜ್ ಘಟಕಗಳಾಗಿವೆ.

100. ಯಾವ ಅಧ್ಯಾಯವು ಪಂಚಾಯತ್ ನೀತಿ ನಿರ್ದೇಶಕ ತತ್ವಗಳನ್ನು ಒಳಗೊಂಡಿದೆ?

ಅ) ಅಧ್ಯಾಯ I

ಆ) ಅಧ್ಯಾಯ II

ಇ) ಅಧ್ಯಾಯ Iಎ

ಈ) ಅಧ್ಯಾಯ III

ಅಧ್ಯಾಯ Iಎ

2015ರ ತಿದ್ದುಪಡಿ ಪ್ರಕಾರ ಅಧ್ಯಾಯ Iಎ ಅನ್ನು ಸೇರ್ಪಡೆಗೊಳಿಸಲಾಗಿದ್ದು, ಅದರಡಿ ಪಂಚಾಯತ್ ನೀತಿ ನಿರ್ದೇಶಕ ತತ್ವಗಳನ್ನು ಸೇರಿಸಲಾಗಿದೆ.

www.karunaduexams.com